ಚಿತ್ರಾಂಗದಾ

ಶ್ರೀನಿವಾಸ

ಚಿತ್ರಾಂಗದಾ

ಶ್ರೀನಿವಾಸ

೦—೧೨—೦

ಮೊದಲನೆಯ ಮುದ್ರಣ ೧೯೪೫

ಬಿ. ಬಿ. ಡಿ. ಪವರ್ ಪ್ರೆಸ್
ಅರಳೆಪೇಟೆ, ಬೆಂಗಳೂರು ಸಿಟಿ

ಮುನ್ನುಡಿ

ಈ ಪುಸ್ತಕ ಕವಿವರ ಶ್ರೀ ರವೀಂದ್ರನಾಥ ಠಾಕೂರರ ವಂಗ ನಾಟಕ ಚಿತ್ರಾಂಗದಾ ಗ್ರಂಥದ ಭಾಷಾಂತರ. ನನ್ನ ಮಿತ್ರರಾದ ಶ್ರೀ ಅ. ನಾರಾಯಣಸ್ವಾಮಿ ಅಯ್ಯರ್ ಅವರಿಂದ ಸ್ವಲ್ಪ ಬಂಗಾಳಿ ಭಾಷೆಯನ್ನು ಕಲಿಯುವುದರಲ್ಲಿ ನಾನು ಈ ನಾಟಕದ ಮೂಲವನ್ನು ಪದಶಃ ನೋಡಬೇಕಾಯಿತು. ಚಿತ್ರಾಂಗದಾ ಠಾಕೂರರ ಅತ್ಯುತ್ತಮವಾದ ಐದಾರು ಕೃತಿಗಳಲ್ಲಿ ಒಂದು. ಇಂಗ್ಲೀಷಿನಲ್ಲಿ ಪ್ರಕಟವಾಗಿರುವ ಇವರ ಗ್ರಂಥಗಳಲ್ಲಿ ಕೂಡ ಇದರ ಇಂಗ್ಲಿಷ್ ರೂಪವಾದ 'ಚಿತ್ರಾ' ಒಂದು ವಿಲಕ್ಷಣ ಸೌಂದರ್ಯದಿಂದ ಶೋಭಿಸುತ್ತದೆ. ಇಷ್ಟು ಉತ್ಕೃಷ್ಟವಾದ ಗ್ರಂಥ ಮೂಲದಲ್ಲಿ ಹೇಗಿದೆಯೆನ್ನುವುದು ನಮ್ಮ ಜನರ ಅವಗಾಹನೆಗೆ ಬರಲೆಂದು ನಾನು ಈ ಭಾಷಾಂತರವನ್ನು ಮಾಡಿದೇನೆ.

ಈ ಸಂದರ್ಭದ ವಂಗ ಭಾಷಾಜ್ಞಾನವೆಲ್ಲ ಶ್ರೀ ನಾರಾಯಣಸ್ವಾಮಿ ಅವರದು. ವಿಷಯ ಕನ್ನಡದಲ್ಲಿ ಪಡೆದಿರುವ ಮಾತು, ರೀತಿ, ಛಂದ, ಅಚ್ಚಂದ, ಎಲ್ಲವೂ ನನ್ನವು. ಕನ್ನಡದ ಮಾತು ರೀತಿಯನ್ನು ನಿರ್ಧರಿಸುವುದರಲ್ಲಿ ನಾನು ಇಂಗ್ಲಿಷ್ 'ಚಿತ್ರಾ' ಗ್ರಂಥದ ಸಹಾಯವನ್ನು ತೆಗೆದುಕೊಂಡಿದೇನೆ. ಮೂಲದ ಛಂದಸ್ಸು ಠಾಕೂರರು ವಂಗ ಭಾಷೆಯಲ್ಲಿ ಬಳಸಿದ ಹೊಸದೊಂದು ಛಂದಸ್ಸು. ಕನ್ನಡದಲ್ಲಿ ಅದಕ್ಕೆ ಹೋಲಬಹುದಾದ ಛಂದಸ್ಸನ್ನು ಬಳಸಲು ನಾನು ಯತ್ನ ಮಾಡಿದೆನು. ಅದು ಸಫಲವಾಗಲಿಲ್ಲ. ಅಳಿದು, ತಿದ್ದಿ, ಮತ್ತೆ ಅಳಿದು, ಕೊನೆಗೆ ಈಗ ಇರಿಸಿಕೊಂಡಿರುವ ಒಂದು ಪದ್ಯಗಂಧಿಯಾದ ಗದ್ಯವನ್ನು ಬಳಸಿದೇನೆ. ಸದ್ಯಕ್ಕೆ ಇದು ಒಂದು ಪ್ರಯೋಗಮಾತ್ರ. ಪ್ರಯೋಗಮಾತ್ರ ಆದರೂ ಕನ್ನಡದ ಹೊಸಕಿವಿಗೆ ಇದು ರುಚಿಸಬಹುದೆಂದೇ ನಾನು ನಂಬಿರುವೆನು.

ಈ ಭಾಷಾಂತರದ ಮೊದಲ ರೂಪ 'ಜೀವನ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿದ್ದ ತಪ್ಪುಗಳನ್ನು ತಿದ್ದಿ ಅವಶ್ಯಕವೆಂದು ಕಂಡ ಮಾರ್ಪಾಡುಗಳನ್ನು ಮಾಡಿ ಈಗಿನ ರೂಪವನ್ನು ಸಿದ್ಧಪಡಿಸಿದೆ.

ಪಾರ್ಥಿವ ಸಂವತ್ಸರ
ನಿಜ ಚೈತ್ರ ಶುದ್ಧ ಪಾಡ್ಯಮಿ }

ಶ್ರೀನಿವಾಸ

ಸೂಚನೆ

ಅನೇಕ ವರ್ಷಗಳ ಹಿಂದೆ ರೈಲ್ ಗಾಡಿಯಲ್ಲಿ ಶಾಂತಿನಿಕೇತನ ದಿಂದ ಕಲ್ಕತ್ತೆಯಕಡೆಗೆ ಹೋಗುತ್ತಿದ್ದೆ. ನೆನಪಿರುವ ಮಟ್ಟಿಗೆ ಆಗ ಚೈತ್ರಮಾಸ. ರೈಲ್ ದಾರಿಯ ಇಕ್ಕೆಲದಲ್ಲೂ ಗಿಡಗೆಂಟೆಗಳ ಕಾಡು. ಹಳದಿ, ನೀಲಿ, ಬಿಳಿ ವರ್ಣಗಳ ಹೂ ಲೆಕ್ಕವಿಲ್ಲದೆ ಅರಳಿದ್ದವು. ನೋಡ ನೋಡುತ್ತ ಮನಸ್ಸಿನಲ್ಲಿ ಒಂದು ಭಾವನೆ ಮೂಡಿತು: "ಇನ್ನು ಕೆಲ ಹೊತ್ತಿನ ನಂತರ ಬಿಸಿಲೇರುವುದು. ಈ ಹೂಗಳು ತಮ್ಮ ವರ್ಣಗಳ ಮರೀಚಿಕೆಯನ್ನು ಎತ್ತಿಕೊಂಡು ಅದೃಶ್ಯವಾಗುವವು. ಆಗ ಹಳ್ಳಿಯ ಪ್ರಾಂಗಣದಲ್ಲಿ ಗಿಡಗಳ ರೆಂಬೆರೆಂಬೆಗಳಲ್ಲಿ ಮಿಡಿಮಾವು ತಲೆದೋರು ವುದು. ತರು ಪ್ರಕೃತಿ ಎಳೆಯ ಫಲಗಳ ಮೂಲಕ ತನ್ನಲ್ಲಿ ಅಡಗಿರುವ ರಸಭಂಡಾರದ ಪರಿಚಯ ಕೊಡುವುದು." ಅದೇ ಸಮಯದಲ್ಲಿ ಹಠಾ ತ್ತಾಗಿ ಮನಸ್ಸಿನಲ್ಲಿ ಹೀಗೆನಿಸಿತು: "ಸುಂದರಿಯಾದ ಯುವತಿ ತಾನು ಪ್ರೇಮಿಕನ ಹೃದಯವನ್ನು ವಶಪಡಿಸಿಕೊಂಡಿರುವುದು ತನ್ನ ಯೌವನದ ಮಾಯೆಯಿಂದ ಎಂಬುದನ್ನು ಒಂದು ವೇಳೆ ಅರಿತಳಾದರೆ ತನ್ನ ಸುಂದರ ರೂಪ ತನ್ನ ಪಾಲಿಗೆ ಬಂದ ಮುದ್ದಿನ ಹೆಚ್ಚು ಅಂಶಕ್ಕೆ ಅಧಿಕಾರಿ ಯಾಗಿರುವ ತಪ್ಪಿಗಾಗಿ ಅದನ್ನು ಸವತಿಯೆಂದು ಧಿಕ್ಕರಿಸುವಳು. ಋತುರಾಜ ವಸಂತನೆಡೆ ಪಡೆದ ವರದಂತೆ ಆ ಸೌಂದರ್ಯ ಆಕೆಯ ಬಾಹ್ಯವಸ್ತು; ನಶ್ವರ ಮೋಹದ ವಿಸ್ತಾರದ ಮೂಲಕ ತನ್ನ ಉದ್ದೇಶ ವನ್ನು ಸಾಧಿಸುವುದಕ್ಕಾಗಿ. ಅವಳ ಅಂತರ್ಯದಲ್ಲಿ ಯಥಾರ್ಥ ಶೀಲ ಶಕ್ತಿ ಇರುವುದಾದರೆ ಆಗ ಆ ಮೋಹಮುಕ್ತ ಶಕ್ತಿಯ ದಾನವೇ ಪ್ರೇಮಿಗೆ ಮಹಾಲಾಭವಾದೀತು. ಆ ಯುಗಲ ಜೀವನದ ಜಯ ಯಾತ್ರೆಯ ಸಾಧನವಾದೀತು. ಆ ದಾನವೇ ಆತ್ಮದ ಶಾಶ್ವತ ಪರಿಚಯ. ಇದರ ಪರಿಣಾಮದಲ್ಲಿ ಕ್ಲಾಂತಿಯಿರದು. ಉತ್ಸಾಹ ಭಂಗವಾಗದು. ಪರಿಚಯದ ಧೂಳು ಕವಿದು ಅದರ ಉಜ್ವಲತೆ ಮಲಿನವಾಗದು. ಈ

ಈ ಭಾಷಾಂತರದ ಮೊದಲ ರೂಪ 'ಜೀವನ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರಲ್ಲಿದ್ದ ತಪ್ಪುಗಳನ್ನು ತಿದ್ದಿ ಅವಶ್ಯಕವೆಂದು ಕಂಡ ಮಾರ್ಪಾಡುಗಳನ್ನು ಮಾಡಿ ಈಗಿನ ರೂಪವನ್ನು ಸಿದ್ಧಪಡಿಸಿದೆ.

ಪಾರ್ಥಿವ ಸಂವತ್ಸರ
ನಿಜ ಚೈತ್ರ ಶುದ್ಧ ಪಾಡ್ಯಮಿ

ಶ್ರೀನಿವಾಸ

ಸೂಚನೆ

ಅನೇಕ ವರ್ಷಗಳ ಹಿಂದೆ ರೈಲ್ ಗಾಡಿಯಲ್ಲಿ ಶಾಂತಿನಿಕೇತನ ದಿಂದ ಕಲ್ಕತ್ತೆಯ ಕಡೆಗೆ ಹೋಗುತ್ತಿದ್ದೆ. ನೆನಪಿರುವ ಮಟ್ಟಿಗೆ ಆಗ ಚೈತ್ರಮಾಸ. ರೈಲ್ ದಾರಿಯ ಇಕ್ಕೆಲದಲ್ಲೂ ಗಿಡಗೆಂಟೆಗಳ ಕಾಡು. ಹಳದಿ, ನೀಲಿ, ಬಿಳಿ ವರ್ಣಗಳ ಹೂ ಲೆಕ್ಕವಿಲ್ಲದೆ ಅರಳಿದ್ದವು. ನೋಡ ನೋಡುತ್ತ ಮನಸ್ಸಿನಲ್ಲಿ ಒಂದು ಭಾವನೆ ಮೂಡಿತು: "ಇನ್ನು ಕೆಲ ಹೊತ್ತಿನ ನಂತರ ಬಿಸಿಲೇರುವುದು. ಈ ಹೂಗಳು ತಮ್ಮ ವರ್ಣಗಳ ಮರೀಚಿಕೆಯನ್ನು ಎತ್ತಿಕೊಂಡು ಅದೃಶ್ಯವಾಗುವವು. ಆಗ ಹಳ್ಳಿಯ ಪ್ರಾಂಗಣದಲ್ಲಿ ಗಿಡಗಳ ರೆಂಬೆರೆಂಬೆಗಳಲ್ಲಿ ಮಿಡಿಮಾವು ತಲೆದೋರು ವುದು. ತರು ಪ್ರಕೃತಿ ಎಳೆಯ ಫಲಗಳ ಮೂಲಕ ತನ್ನಲ್ಲಿ ಅಡಗಿರುವ ರಸಭಂಡಾರದ ಪರಿಚಯ ಕೊಡುವುದು." ಅದೇ ಸಮಯದಲ್ಲಿ ಹಠಾ ತ್ತಾಗಿ ಮನಸ್ಸಿನಲ್ಲಿ ಹೀಗೆನಿಸಿತು: "ಸುಂದರಿಯಾದ ಯುವತಿ ತಾನು ಪ್ರೇಮಿಕನ ಹೃದಯವನ್ನು ವಶಪಡಿಸಿಕೊಂಡಿರುವುದು ತನ್ನ ಯೌವನದ ಮಾಯೆಯಿಂದ ಎಂಬುದನ್ನು ಒಂದು ವೇಳೆ ಅರಿತಳಾದರೆ ತನ್ನ ಸುಂದರ ರೂಪ ತನ್ನ ಪಾಲಿಗೆ ಬಂದ ಮುದ್ದಿನ ಹೆಚ್ಚು ಅಂಶಕ್ಕೆ ಅಧಿಕಾರಿ ಯಾಗಿರುವ ತಪ್ಪಿಗಾಗಿ ಅದನ್ನು ಸವತಿಯೆಂದು ಧಿಕ್ಕರಿಸುವಳು. ಋತುರಾಜ ವಸಂತನೆಡೆ ಪಡೆದ ವರದಂತೆ ಆ ಸೌಂದರ್ಯ ಆಕೆಯ ಬಾಹ್ಯವಸ್ತು; ನಶ್ವರ ಮೋಹದ ವಿಸ್ತಾರದ ಮೂಲಕ ತನ್ನ ಉದ್ದೇಶ ವನ್ನು ಸಾಧಿಸುವುದಕ್ಕಾಗಿ. ಅವಳ ಅಂತರ್ಯದಲ್ಲಿ ಯಥಾರ್ಥ ಶೀಲ ಶಕ್ತಿ ಇರುವುದಾದರೆ ಆಗ ಆ ಮೋಹಮುಕ್ತ ಶಕ್ತಿಯ ದಾನವೇ ಪ್ರೇಮಿಗೆ ಮಹಾಲಾಭವಾದೀತು. ಆ ಯುಗಲ ಜೀವನದ ಜಯ ಯಾತ್ರೆಯ ಸಾಧನವಾದೀತು. ಆ ದಾನವೇ ಆತ್ಮದ ಶಾಶ್ವತ ಪರಿಚಯ. ಇದರ ಪರಿಣಾಮದಲ್ಲಿ ಕ್ಲಾಂತಿಯಿರದು. ಉತ್ಸಾಹ ಭಂಗವಾಗದು. ಪರಿಚಯದ ಧೂಳು ಕವಿದು ಅದರ ಉಜ್ವಲತೆ ಮಲಿನವಾಗದು. ಈ

ಶೀಲಶಕ್ತಿ ಬಾಳುವೆಯ ಶಾಶ್ವತ ಬಂಡವಾಳ. ಮಮಕಾರವಿಹೀನ ಪ್ರಕೃತಿ ಸಾಕೆನ್ನುವ ಆಶುಪ್ರಯೋಜನವನ್ನು ಅದು ನಂಬಿರದು. ಎಂದರೆ ಇದರ ಮೂಲ್ಯ ಮಾನವಿಕ—ಬರಿಯ ಪ್ರಕೃತಿಯದಲ್ಲ".

ಈ ಭಾವನೆಗಳನ್ನು ನಾಟಕದ ರೂಪದಲ್ಲಿ ವ್ಯಕ್ತಮಾಡುವ ಆಶೆ ಆಗಲೇ ಮನದಲ್ಲಿ ಉದಯಿಸಿತು. ಅದರ ಸಂಗಡಲೇ ಮಹಾಭಾರತದ ಚಿತ್ರಾಂಗದೆಯ ಕಥೆ ನೆನಪಾಯಿತು. ಆ ಕಥೆ ಸ್ವಲ್ಪ ರೂಪಾಂತರ ಹೊಂದಿ ಬಹುಕಾಲ ನನ್ನ ಮನಸ್ಸಿನಲ್ಲಿ ಅಡಗಿತ್ತು. ಕೊನೆಗೆ ಅದನ್ನು ಬರೆಯುವ ಆನಂದಪೂರ್ಣ ಅವಕಾಶ ಒರಿಸ್ಸಾದ ಪಾಂಡುಯಾ ಎಂಬ ಹೆಸರಿನ ನಿಭೃತವಾದ ಹಳ್ಳಿಯಲ್ಲಿ ಸಿಕ್ಕಿತು.

ಕಟಿಕ್
೨೮ ಭಾದ್ರಪದ, ೧೨೯೮ (ವಂಗಾಬ್ದ)
[ಕ್ರಿ. ಶ. ೧೮೯೧]

ಶ್ರೀ. ರವೀಂದ್ರನಾಥ ಠಾಕೂರ

ಚಿತ್ರಾಂಗದಾ

೧

ಅನಂಗಾಶ್ರಮ

ಚಿತ್ರಾಂಗದಾ, ಮದನ, ವಸಂತ

ಚಿತ್ರಾಂಗದಾ

ತಾವು ಪಂಚ ಬಾಣರೊ?

ಮದನ

ಹೌದು; ನಾನು ಮನಸಿಜ;
ಲೋಕದ ನರನಾರಿಯರ ಹೃದಯಗಳನ್ನು
ವೇದನೆಯ ಬಂಧನದಿಂದ ಎಳೆಯುವವನು.

ಚಿತ್ರಾಂಗದಾ

ಅದು ಎಂಥ ವೇದನ, ಎಂಥ ಬಂಧನ, ಅದನ್ನು
ನಿಮ್ಮ ಸೇವಕಿ ಬಲ್ಲೆನು. ತಮ್ಮಡಿಗೆ ಎರಗುತ್ತೇನೆ.
ಪ್ರಭು, ತಾವು ಯಾರು, ದೇವ?

ವಸಂತ

ನಾನು ಋತುರಾಜ.
ಜರಾಮೃತ್ಯು ದೈತ್ಯದ್ವಯ ನಿಮಿಷ ನಿಮಿಷವೂ
ಸೃಷ್ಟಿಯ ಎಲುಗೂಡನ್ನು ಹೊರಗೆಡಹ ತೊಡಗಿದೆ.
ನಾನು ಅದರ ಹಿಂದೆಹಿಂದೆ ಸುಳಿದು ಪದೇಪದೇ ಅದನ್ನು
ಸೋಲಿಸುತ್ತಿರುವೆನು. ಹಗಲಿರುಳೂ ಸಂಗ್ರಾಮ.
ನಾನು ಸೃಷ್ಟಿಯ ಆ ಅನಂತ ಯೌವನ.

ಚಿತ್ರಾಂಗದಾ

ನಿಮಗೆ ಪ್ರಣಾಮ, ಭಗವಾನ್. ಸೇವಕಳು
ದೇವದರ್ಶನದಿಂದ ಚರಿತಾರ್ಥಳು.

ಮದನ

ಕಲ್ಯಾಣಿ,
ನೀನು ಈ ಕಠೋರ ವ್ರತವನ್ನು ಕೈಗೊಂಡು
ತಪಸ್ಯದ ತಾಪದಲ್ಲಿ ಯೌವನ ಕುಸುಮುವನ್ನು
ಮಲಿನ ಖಿನ್ನ ಮಾಡುವುದು ಯಾವ ಉದ್ದೇಶದಿಂದ ?
ಅನಂಗಪೂಜೆಯ ವಿಧಾನ ಇದಲ್ಲ, ಭದ್ರೆ.
ನೀನು ಯಾರು, ನಿನ್ನ ಬಯಕೆಯೇನು ?

ಚಿತ್ರಾಂಗದಾ

ದಯೆ ಹುಟ್ಟಿರುವುದಾದರೆ ನನ್ನ ಕಥೆಯನ್ನು ಲಾಲಿಸಿ.
ಅದಾದ ನಂತರ ನನ್ನ ಬಯಕೆಯನ್ನು ತಿಳಿಸುವೆನು.

ಮದನ

ಹೇಳು, ಕೇಳಲು ಉತ್ಸುಕನಾಗಿದೇನೆ.

ಚಿತ್ರಾಂಗದಾ

ನಾನು ಚಿತ್ರಾಂಗದೆ. ಮಣಿಪುರದ ರಾಜಪುತ್ರಿ.
ತಪಸ್ಸಿನಿಂದ ತುಷ್ಟನಾಗಿ ದೇವ ಉಮಾಪತಿ
ನನ್ನ ಪಿತೃವಂಶದಲ್ಲಿ ಹೆಣ್ಣಿಂದ ಸಂತತಿ
ವಿಚ್ಛೇದವಾಗದೆಂದು ವರವನ್ನಿತ್ತನು.
ಆ ಮಹಾವರವನ್ನು ನಾನು ವ್ಯರ್ಥಗೊಳಿಸಿದೆನು.
ಅಮೋಘ ದೇವತಾವಾಕ್ಯ ಮಾತೃಗರ್ಭವನ್ನು ಮುಟ್ಟಿ
ನನ್ನ ಆರಬ್ಧ ಅಬಲಾತ್ವವನ್ನು ಶೈವ ತೇಜದಿಂದ
ಪುರುಷರೂಪ ಮಾಡಲಾರದೆ ಹೋಯಿತು.
ಅಂಥ ಕಠಿಣ ನಾರಿತ್ವ ನನ್ನದು.

ಮದನ

ನಾನು ಕೇಳಿ ಬಲ್ಲೆ.
ಅಂತೇ ನಿನ್ನ ತಂದೆ ನಿನ್ನನ್ನು ಪುತ್ರನೆಂಬಂತೆ ಸಲಹಿದನು,
ನಿನಗೆ ಧನುರ್ವಿದ್ಯೆ ರಾಜದಂಡನೀತಿಯನ್ನು ಕಲಿಸಿದನು.

ಚಿತ್ರಾಂಗದಾ

ಆದರಿಂದಲೇ ನಾನು ಯಾವಾಗಲೂ ಪುರುಷ ವೇಷದಲ್ಲಿ
ಯುವರಾಜನಂತೆ ರಾಜ್ಯಕಾರ್ಯ ಮಾಡುತ್ತ
ನನಗೆ ಇಷ್ಟ ಬಂದಂತೆ ತಿರುಗುತ್ತಿರುವೆನು.
ಲಜ್ಜೆ ಭಯ ಅಂತಃಪುರವಾಸವನ್ನು ಅರಿಯೆನು.
ಅರಿಯೆನು ಹೆಣ್ಣ ಹಾವಭಾವ ವಿಲಾಸ ಚಾತುರಿಯನ್ನು.
ಧನುರ್ವಿದ್ಯೆ ಕಲಿತೆನು. ಆದರೆ, ದೇವ, ಕಣ್ಣ ಕೊನೆಯಲ್ಲಿ
ನಿನ್ನ ಪುಷ್ಪಧನುವನ್ನು ಬಾಗಿಸುವ ಪರಿಯನ್ನು
ತೀರಾ ಕಲಿಯದೆ ಬಿಟ್ಟೆನು.

ವಸಂತ

ಓ ಚಾರುಲೋಚನೆ
ಆ ವಿದ್ಯೆ ಯಾವ ನಾರಿಗೂ ಕಲಿವಿಂದ ಬರುವುದಿಲ್ಲ.
ಕಣ್ಣು ತಮ್ಮ ಕೆಲಸವನ್ನು ಮಾಡಿಬಿಡುತ್ತವೆ.
ಯಾರ ಎದೆಗೆ ತಾಗಿತು, ಅವರೇ ಬಲ್ಲರು.

ಚಿತ್ರಾಂಗದಾ

ಒಂದು ದಿನ
ನಾನು ಒಬ್ಬಳೆ ಪೂರ್ಣಾನದೀ ತೀರದಲ್ಲಿ
ಘನವನದಲ್ಲಿ ಮೃಗಾನ್ವೇಷಣಕ್ಕೆ ಹೋಗಿದ್ದೆನು.
ಒಂದು ಮರದಡಿ ಕುದುರೆಯನ್ನು ಕಟ್ಟಿ
ದುರ್ಗಮ ಕುಟಿಲ ವನಪಥದಲ್ಲಿ
ಜಿಂಕೆಯ ಅಡಿಯ ಗುರುತನ್ನು ಅನುಸರಿಸಿ ಹೊಕ್ಕೆನು.
ಝಿಲ್ಲಿಯ ಮಂದ್ರಸ್ವರದಿಂದ ತೀವಿ ತುಂಬಿ
ಲತಾಗುಲ್ಮದಿಂದ ಎಲ್ಲ ಹೊತ್ತೂ ಕತ್ತಲಾದ
ಗಹನ ಗಂಭೀರವಾದ ಮಹಾರಣ್ಯದಲ್ಲಿ
ಸ್ವಲ್ಪದೂರ ಮುಂದರಿದು ಸಹಸಾ ಕಂಡೆನು :
ಕಿರಿದಾದ ದಾರಿಯನ್ನು ತೀರಾ ಅಡ್ಡಗಟ್ಟಿ
ನೆಲದಲ್ಲಿ ಮಲಗಿರುವ ಚೀರಧಾರಿಯಾದ

ಮಲಿನ ಪುರುಷನನ್ನು. ಅಸಡ್ಡೆಯ ಸ್ವರದಿಂದ,
ಏಳು, ಪಕ್ಕಕ್ಕೆ ಸರಿ ಎಂದು ಹೇಳಿದೆನು.
ಅವನು ಅಲುಗಲಿಲ್ಲ ತಿರುಗಿ ನೋಡಲಿಲ್ಲ.
ಉದ್ಧತಳಾಗಿ ಅತಿ ರೋಷದಿಂದ ಅವನನ್ನು
ಧನುವಿನ ಕೊನೆಯಿಂದ ತಾಡನ ಮಾಡಿದೆನು.
ಬೂದಿಯಲ್ಲಿ ಅಡಗಿರುವ ಅಗ್ನಿ ಘೃತಾಹುತಿ ಹೊಂದಿ
ಎವೆಯಿಕ್ಕುವಷ್ಟರಲ್ಲಿ ಶಿಖಾರೂಪದಿಂದ
ಮೇಲೆ ಏಳುವ ರೀತಿ ಅವನ ಸರಲ ಸುದೀರ್ಘದೇಹ
ಕ್ಷಣಮಾತ್ರದಲ್ಲಿ ಅಂಬಿನ ವೇಗದಿಂದ
ನನ್ನ ಎದುರಿನಲ್ಲಿ ಎದ್ದು ನಿಂತಿತು.
ಕ್ಷಣಮಾತ್ರ ಅವನು ನನ್ನ ಮುಖವನ್ನು ನೋಡಿದನು;
ನನ್ನ ಬಾಲಕಮೂರ್ತಿ ಕಂಡದ್ದರಿಂದ ಇರಬೇಕು,
ಮೊದಲ ರೋಷದೃಷ್ಟಿ ಅವನ ರೆಪ್ಪೆಯಲ್ಲಿ ಅಡಗಿತು.
ತುಂಬಿದ, ಆದರೂ ಅಡಗಿದ, ಕೌತುಕದ ಮೃದು ನಗೆಯ
ಗೆರೆ ಒಂದು ಅವನ ಅಧರದ ಕೊನೆಯಲ್ಲಿ ಕುಣಿಯಿತು.
ಪುರುಷವಿದ್ಯೆಯನ್ನು ಕಲಿತು ಪುರುಷವೇಷವನ್ನು ತಳೆದು
ಪುರುಷರ ಜೊತೆ ಇದ್ದು ಇಷ್ಟುದಿನ ನಾನು ಮರೆತಿದ್ದ
ನಾನೊಂದು ಹೆಣ್ಣೆಂಬ ದಿಟವನ್ನು ನಾನು
ಆ ಮುಖವನ್ನೂ, ತನ್ನಲ್ಲಿ ತಾನು ಅಚಲವಾಗಿದ್ದ
ಆ ಮೂರ್ತಿಯನ್ನೂ ಕಂಡು ಒಂದೆ ಕ್ಷಣದಲ್ಲಿ
ನನ್ನ ಮನಸ್ಸಿನಲ್ಲಿ ತಿಳಿದೆನು. ಆ ಕ್ಷಣ ನನ್ನೆದುರಲ್ಲಿ
ನನ್ನ ಪುರುಷನನ್ನು ಮೊತ್ತಮೊದಲು ಕಂಡೆನು.

ಮದನ

ಅದು ನಾನು ಕಲಿಸಿದ ಪಾಠ, ಓ ಸುಲಕ್ಷಣೇ.
ಯಾವಾಗಲೋ ಬಾಳಿನ ಒಂದು ಶುಭಪಾವನಕ್ಷಣದಲ್ಲಿ
ನಾರಿ ನಾರಿಯಾಗುವಂತೆ, ಪುರುಷ ಪುರುಷನಾಗುವಂತೆ
ನಾನೇ ಅವರನ್ನು ಎಚ್ಚರಗೊಳಿಸುವೆನು. ಆ ಮೇಲೆ?

ಚಿತ್ರಾಂಗದಾ

ಸಭಯವಿಸ್ಮಯ ಕಂಠದಿಂದ ನಾನು ಅವನನ್ನು
" ಯಾರು ನೀನು?" ಎಂದು ಪ್ರಶ್ನೆ ಮಾಡಿದೆನು.
ಉತ್ತರ ಕೇಳಿಸಿತು: "ನಾನು ಪಾರ್ಥ; ಕುರುವಂಶಧರ."
ಇದನ್ನು ಕೇಳಿ ನಾನು ಚಿತ್ರದಂತೆ ನಿಂತುಬಿಟ್ಟೆನು.
ಅವನಿಗೆ ಪ್ರಣಾಮ ಮಾಡುವುದನ್ನು ಮರೆತೆನು.
ಹುಟ್ಟಿದ ಮೊದಲು ನಾನು ಕುತೂಹಲದಿಂದ ನೆನೆದಿದ್ದ
ಪಾರ್ಥನೆ ಇವನು? ಕೇಳಿಬಲ್ಲೆ, ಪಾರ್ಥನು ಸತ್ಯಕ್ಕಾಗಿ
ಹನ್ನೆರಡು ವರ್ಷ ವನವನದಲ್ಲಿ ಸುತ್ತುತ್ತ
ಬ್ರಹ್ಮಚರ್ಯವನ್ನು ಪಾಲಿಸುತ್ತಿರುವನು ಎಂದು:
ಇವನೇ ಆ ವೀರ ಪಾರ್ಥ?

ಬಾಲ್ಯದಲ್ಲಿ
ಎಷ್ಟುಸಲ ನಾನು ಮನಸ್ಸಿನಲ್ಲಿ ಹಿರಿಯಾಸೆಪಟ್ಟವಳು:
ನನ್ನ ಭುಜಬಲದಿಂದ ಪಾರ್ಥನ ಕೀರ್ತಿಯನ್ನು
ನಿಷ್ಪ್ರಭೆಪಡಿಸಬೇಕು, ತಪ್ಪದೆ ಗುರಿ ಸಾಧಿಸಬೇಕು,
ಪುರುಷನ ಛದ್ಮ ವೇಷದಿಂದ ಅವನೊಡನೆ ಯುದ್ಧ ಬೇಡಿ
ನನ್ನ ಶೌರ್ಯದ ಪರಿಚಯವನ್ನು ಕೊಡಬೇಕು ಎಂದು!
ಎಲೆಮುಗ್ಧೆ, ಆ ನಿನ್ನ ಸ್ಪರ್ಧೆ ಈಗ ಎತ್ತಹೋಯಿತು?
ಈಗ ಅವನು ನಿಂತಿದ್ದ ನೆಲದ ಹುಲ್ಲೆಸಳು ಆಗಿದ್ದೆನಾದರೆ
ನನ್ನ ಶೌರ್ಯ ವೀರ್ಯ ಎಲ್ಲವನ್ನೂ ಧೂಳಿನಲ್ಲಿ ಬೆರಸಿ
ಅವನ ಚರಣತಲದಲ್ಲಿ ಮರಣವನ್ನು ಪಡೆದು
ಅದು ಎಂಥ ಭಾಗ್ಯ ಎಂದು ಭಾವಿಸುವಂತಾದೆನು.
ಏನೇನು ಯೋಚಿಸಿದೆನೋ ನನಗೆ ನೆನಪಿಲ್ಲ.
ನಾನು ನೋಡುತಿದ್ದಂತೆಯೇ ಆ ವೀರನು
ಗಂಭೀರ ಗತಿಯಿಂದ ವನದ ಒಳಗೆ ಮರೆದನು.
ಬೆಚ್ಚಿ ಎಚ್ಚತ್ತೆನು. ಆ ಕ್ಷಣ ಹುಟ್ಟಿತು ಚೈತನ್ಯ.
ನನ್ನನ್ನು ನಾನೇ ನೂರು ಸಲ ಹಳಿದುಕೊಂಡೆನು:

ಛೀ ಛೀ ಮೂಢೇ! ಮಾತನಾಡಲಿಲ್ಲ; ಕೇಳಲಿಲ್ಲ;
ಕ್ಷಮೆ ಬೇಡಲಿಲ್ಲ; ವನ್ಯಜೀವಿಯಂತೆ ನಿಂತೆ;
ನಿನ್ನನ್ನು ತಿರಸ್ಕರಿಸಿ ನಡೆದನಲ್ಲವೆ ವೀರ!
ಆ ಕ್ಷಣವೇ ನಾನು ಸತ್ತು ಮುಗಿದಿದ್ದರೆ
ಚೆನ್ನಾಗಿತ್ತು ಎಂದುಕೊಂಡೆನು. ಮಾರನೆಯ ಉದಯ
ನನ್ನ ಪುರುಷವೇಷವನ್ನು ದೂರ ಎಸೆದೆನು.
ಚಂದ್ರಗಾವಿಯನ್ನುಟ್ಟೆನು; ಕಡಗ ಪಾಡಗ
ಒಡ್ಯಾಣವನ್ನು ತಳೆದೆನು. ವಾಡಿಕೆಯದಲ್ಲದ
ಈ ಅಲಂಕಾರದಿಂದ ನಾಚಿ ನನ್ನೊಡಲು
ಪೂರಾ ಸಂಕೋಚಪಟ್ಟು ನೆಗ್ಗಿ ಹೋಗುತ್ತಿರಲು
ಯಾರೂ ಅರಿಯದಂತೆ ಆ ವನಕ್ಕೆ ಹೋಗಿ
ಅರಣ್ಯದ ಶಿವಾಲಯದಲ್ಲಿ ಅವನನ್ನು ನೋಡಿದೆನು.

ಮದನ

ಹೇಳು, ಬಾಲೆ. ನನ್ನೆದುರು ನಾಚಿಕೆ ಬೇಡ.
ನಾನು ಮನಸಿಜ; ಮನಸ್ಸಿನ ಒಳಗಿನದು
ಸಕಲ ರಹಸ್ಯವನ್ನೂ ನಾನು ಬಲ್ಲೆನು.

ಚಿತ್ರಾಂಗದಾ

ನಾನು ಆ ವೇಳೆ ಅಲ್ಲಿ ಏನು ಹೇಳಿದೆನೋ
ಅವನಿಂದ ಪ್ರತಿಯಾಗಿ ಅದೇನು ಕೇಳಿದೆನೋ
ಚೆನ್ನಾಗಿ ನೆನಪಿಲ್ಲ. ಇನ್ನು ಕೆದಕಬೇಡ, ಭಗವನ್.
ಅಪಮಾನ ತಲೆಯ ಮೇಲೆ ಸಿಡಿಲಂತೆ ಎರಗಿತು;
ಆದರೂ ನನ್ನನ್ನು ನೂರುಪಾಲು ಮಾಡದೆಹೋಯಿತು.
ನಾರಿಯದಾದರೂ ನನ್ನ ಪ್ರಾಣ ಹೀಗೆ ಗಡುಸಾದದ್ದು.
ಕೆಟ್ಟ ಕನಸಿನಿಂದ ವಿಹ್ವಲಳಾದಂತೆ ಅದು ಹೇಗೋ
ನನಗೇ ತಿಳಿಯದೆ ಮನೆಗೆ ಮರಳಿ ಬಂದೆನು.
ಅವನು ಕೊನೆಗೆ ಹೇಳಿದ ಮಾತು ಮಾತ್ರ

ಕಾದ ದಬ್ಬಳದಂತೆ ನನ್ನ ಕಿವಿಯನ್ನು ಇರಿಯುತಿತ್ತು :
"ನಾನು ಬ್ರಹ್ಮಚರ್ಯವ್ರತ ಧರಿಸಿದೇನೆ, ವರಾಂಗನೆ,
ನನಗೆ ಮದುವೆಯಾಗುವ ಅಧಿಕಾರವಿಲ್ಲ."

ಪುರುಷನ ಬ್ರಹ್ಮಚರ್ಯ ! ನನ್ನ ಹಾಳು ಮೋರೆಯೇ !
ನಾನು ಅದನ್ನು ಅಲುಗಿಸಲಾರದೆಹೋದೆನು.
ಮೀನಕೇತನ, ನೀನು ಬಲ್ಲೆ ಎಷ್ಟು ಋಷಿಮುನಿಗಳು
ತಮ್ಮ ಚಿರಾರ್ಜಿತವಾದ ತಪಃಫಲವನ್ನು
ನಾರಿಯರ ಪದ ತಲದಲ್ಲಿ ವಿಸರ್ಜನ ಮಾಡಿದಾರೆ.
ಕ್ಷತ್ರಿಯನ ಬ್ರಹ್ಮಚರ್ಯ ! ನಾನು ಮನೆ ಸೇರಿದೆನು.
ಬಿಲ್ಲುಬಾಣ ಇದ್ದದನ್ನೆಲ್ಲ ಮುರಿದೆಸೆದೆನು ;
ಈ ವರೆಗೆ ನನಗೆ ಹೆಮ್ಮೆಯ ಸಂಪತ್ತಾಗಿದ್ದ
ಕಿಣಾಂಕಿತವಾದ ಈ ಕಠಿಣ ಬಾಹುಗಳನ್ನು
ವ್ಯರ್ಥ ಆಕ್ರೋಶಭರದಲ್ಲಿ ತಿರಸ್ಕರಿಸಿದೆನು.
ಯಾವಾಗ ನಾರಿಯಾದವಳು ಪುರುಷನ ಮನಸ್ಸನ್ನು
ಗೆಲ್ಲದೆ ಹೋದೆನೋ ಆಗ ಕಲಿವೆಲ್ಲ ವ್ಯರ್ಥ
ಎಂಬ ವಿಷಯವನ್ನು ಇಷ್ಟು ದಿನದ ಮೇಲೆ ಅರಿತೆನು.
ಅಬಲೆಯೆಂಬವಳ ಕೋಮಲ ಮೃಣಾಲ ಬಾಹುದ್ವಯ
ಈ ನನ್ನ ಬಾಹುಗಳಿಗಿಂತ ಶತಗುಣ ಬಲವುಳ್ಳವು.
ಪರಾವಲಂಬಿ, ಮುಗ್ಧ ಮೂರ್ಖ, ಕ್ಷೀಣತನುಲತೆಯ ಹೆಣ್ಣು,
ಲಜ್ಜಾಭಯದಿಂದ ಲೀನಾಂಗಿನಿ ಆದ ಸಾಮಾನ್ಯ ಲಲನೆ,
ನಿಜವಾಗಿ ಧನ್ಯೆ; ಅವಳ ಕಣ್ಣೆವೆ ಅದುರಿದರೆ
ಶೂರನ ಬಲ, ತಪಸ್ವಿಯ ತೇಜ, ಸೋಲನ್ನೊಪ್ಪುತ್ತವೆ.
ಹೇ ಅನಂಗದೇವ, ನನ್ನ ಎಲ್ಲ ಜಂಭವನ್ನೂ
ಒಂದೇ ಸಲಕ್ಕೆ ಕಿತ್ತುಕೊಂಡಿದೀಯೆ ;
ನನ್ನ ಎಲ್ಲ ವಿದ್ಯವನ್ನೂ ಎಲ್ಲ ಬಲವನ್ನೂ
ಒಮ್ಮೆಗೇ ನಿನ್ನಡಿಗೆ ಎರಗಿಸಿಕೊಂಡಿದೀಯೆ.
ಈಗ ನನಗೆ ನಿನ್ನ ವಿದ್ಯೆಯನ್ನು ಕಲಿಸಿಕೊಡು ;

ಅಬಲೆಯ ಬಲವನ್ನು, ನಿರಸ್ತ್ರಳ ಎಲ್ಲ ಅಸ್ತ್ರವನ್ನು,
ನನಗೆ ದಯಪಾಲಿಸು.

ಮದನ

ಆಗಲಿ, ಶುಭಾಂಗಿ ;
ನಾನು ನಿನ್ನ ಸಹಾಯಕನಾಗಿ ನಿಲ್ಲುತ್ತೇನೆ ;
ವಿಶ್ವವಿಜಯಿಯಾದ ಅರ್ಜುನನನ್ನು ಜಯಿಸಿ
ಬಂದಿಮಾಡಿ ನಿನ್ನ ಸಮ್ಮುಖದಲ್ಲಿ ಒಡ್ಡುತ್ತೇನೆ ;
ರಾಜ್ಞಿಯಾಗಿ ನೀನು ಅವನಿಗೆ ನಿನ್ನ ಇಚ್ಛೆ
ಎಷ್ಟು ಇದೆ ಅಷ್ಟು ದಂಡ ಪುರಸ್ಕಾರಕೊಡು,
ವಿದ್ರೋಹಿಯಾದ ಅವನಿಗೆ ತಕ್ಕ ಶಿಕ್ಷೆಯನ್ನು ವಿಧಿಸು.

ಚಿತ್ರಾಂಗದಾ

ಸಮಯವಿದ್ದರೆ, ನಾನೇ, ಇತರರ ನೆರವಿಲ್ಲದೆ,
ಸ್ವಲ್ಪಸ್ವಲ್ಪವಾಗಿ ಅವನ ಮನಸ್ಸನ್ನು ವಶಪಡಿಸಿಕೊಳ್ಳುತಿದ್ದೆನು ;
ದೇವತೆಗಳ ಸಹಾಯವನ್ನು ಬಯಸುತ್ತಿರಲಿಲ್ಲ.
ಜೊತೆಯಾಗಿ ಅವನೊಡನೆ ಬಾಳು ನಡಸುತ್ತ,
ಅವನ ಸಾರಥಿಯಾಗಿ ರಣದಲ್ಲಿ ರಥ ನಡಸಿ,
ಬೇಟೆಯಲ್ಲಿ ಅವನ ಅನುಚರನಾಗಿ ನಡೆದು,
ಶಿಬಿರದ್ವಾರದಲ್ಲಿ ಇರುಳು ಕಾವಲು ಕಾದು,
ಭಕ್ತನಂತೆ ಪೂಜಿಸಿ, ಭೃತ್ಯನಂತೆ ಊಳಿಗಮಾಡಿ,
ಕ್ಷತ್ರಿಯರ ವ್ರತವಾದ ಆರ್ತಪರಿತ್ರಾಣದಲ್ಲಿ
ಅವನಿಗೆ ಸಖನಂತೆ ಸಹಾಯಳಾಗುತಿದ್ದೆನು.
ಎಂದೋ ಒಂದು ದಿನ ಅವನು ನನ್ನನ್ನು
ಕೌತುಕದಿಂದ ನೋಡಿ 'ಯಾರು ಈ ಬಾಲಕ?
ಪೂರ್ವ ಜನ್ಮದ ದಾಸನೋ? ಹಿಂಬಾಲಿಸುವ ಸುಕೃತದಂತೆ
ಈ ಜನ್ಮದಲ್ಲಿ ಜೊತೆಗೆ ಸೇರಿರುವನು'
ಎಂದು ತನ್ನ ಮನಸ್ಸಿನಲ್ಲಿ ಯೋಚಿಸುತ್ತಿದ್ದನು.
ಕ್ರಮೇಣ ನಾನು ಅವನ ಹೃದಯ ದ್ವಾರವನ್ನು ತೆರೆದು

ಅಲ್ಲಿ ಚಿರವಾದ ಸ್ಥಾನವನ್ನು ಪಡೆಯುತ್ತಿದ್ದೆನು.
ನಾನು ಬಲ್ಲೆ, ನನ್ನ ಪ್ರೇಮ ಬರಿಯ ಕ್ರಂದನದ್ದಲ್ಲ.
ನಿಶೀಥ ನಯನಜಲದಲ್ಲಿ, ಮೆಲ್ಲನೆ, ಮಾತಿಲ್ಲದೆ
ಚಿರಮರ್ಮ ವ್ಯಥೆಯನ್ನು ಪಾಲನಮಾಡಿ
ಹಗಲ ಬೆಳಕಿನಲ್ಲಿ ಅದನ್ನು ಮ್ಲಾನವಾದ
ಹಾಸದಡಿಯಲ್ಲಿ ಮರಸಿ ಮುಚ್ಚಿಡುವಂಥ
ಹುಟ್ಟು ವಿಧವೆ ನಾರಿಯರುಂಟೆ! ನಾನಂಥವಳಲ್ಲ.
ನನ್ನ ಎಣಿಕೆ ಎಂದೂ ನಿಷ್ಫಲವಾಗದು.
ನನ್ನ ಸ್ವರೂಪವನ್ನು ಅವನಿಗೆ ಒಮ್ಮೆ ತಿಳಿಸ ಬಲ್ಲೆನೇ,
ನಿಶ್ಚಯವಾಗಿ ಅವನು ನನಗೆ ಸಿಕ್ಕುವನು. ಹಾ ಹತವಿಧಿ!
ಆ ದಿನ ನೀನು ಏನು ನೋಡಿದೆ! ನಾಚಿಕೆಯಿಂದ ಕುಗ್ಗಿದ
ಶಂಕಿತ ಕಂಪಿತ ನಾರಿಯನ್ನು; ವಿವಶ ವಿಹ್ವಲ
ಪ್ರಲಾಪ ವಾದಿನಿಯನ್ನು. ನಾನು ನಿಜವಾಗಿ ಅಷ್ಟೆಯೇ ?
ಯಾವ ಸಹಸ್ರ ನಾರಿಯರು ದಾರಿಯಲ್ಲಿ, ಮನೆಯಲ್ಲಿ,
ನಾಲ್ಕು ದಿಕ್ಕಿನಲ್ಲಿ ಕೇವಲ ಕ್ರಂದನಾಧಿಕಾರಿಗಳಿದಾರೆ,
ಅವರಿಗಿಂತ ನಾನು ಏನೂ ಹೆಚ್ಚೇ ಅಲ್ಲವೆ?
ಆದರೆ, ಅಯ್ಯೋ, ನಾನೆ ನನ್ನ ಪರಿಚಯ ಮಾಡಿ ಕೊಡುವುದು
ಬಹುಮೆಲ್ಲನೆ, ಬಹುದಿನದಲ್ಲಿ, ಆಗತಕ್ಕ ಕೆಲಸ;
ಚಿರಜೀವನದ ದುಡಿಮೆ; ಜನ್ಮಜನ್ಮಾಂತರದ ವ್ರತ.
ಆದ್ದರಿಂದ ನಾನು ನಿಮ್ಮ ಬಾಗಿಲಿಗೆ ಬಂದು
ಕಠೋರ ತಪ ಮಾಡಿದೇನೆ. ಹೇ ಭುವನವಿಜಯಿ
ಮನಸಿಜ, ಹೇ ಮಹಾಸುಂದರ ಋತುರಾಜ,
ಕೇವಲ ಒಂದು ದಿನ ಮಾತ್ರ ಜನ್ಮದಾತ ವಿಧಾತನ
ಈ ನಿಷ್ಕಾರಣ ಅಭಿಶಾಪ ಕುರೂಪ ನಾರೀರೂಪನ್ನು
ತೊಡೆದು ನನ್ನನ್ನು ಅಪೂರ್ವ ಸುಂದರಿಯಾಗಿ ಮಾಡಿ.
ಆ ಒಂದು ದಿನವನ್ನು ಕೊಡಿ; ಅದರ ನಂತರ ಎಲ್ಲ ದಿನ
ನನ್ನ ಕೈಯಲ್ಲಿರುವುವು. ಅವನನ್ನು ನೋಡಿದ ಆ ಕ್ಷಣ

ಆದೇ ಮುಹೂರ್ತದಲ್ಲಿ ನನ್ನ ಹೃದಯವನ್ನು
ಅಂತ್ಯವನ್ನರಿಯದ ವಸಂತಋತು ಹೊಕ್ಕಿತು.
ಆ ಯೌವನೋಚ್ಛ್ವಾಸದಲ್ಲಿ ನೋಡುತಿದ್ದಂತೆ,
ಸರ್ವಾಂಗವೂ ಅಪೂರ್ವ ಪುಲಕ ಭರದಿಂದ
ಲಕ್ಷ್ಮಿಯ ಪದತಲದ ಪದ್ಮದಂತೆ ಮಲರೀತೆ ಎಂದು
ಹಿರಿಯಾಸೆ ಹುಟ್ಟಿತು. ಓ ವಸಂತ, ಓ ವಸಂತಸಖ,
ಆ ನನ್ನ ಆಸೆಯನ್ನು ಬರೀ ಒಂದು ದಿನದ ಮಾತ್ರ
ತುಂಬಿರಿ.

ಮದನ

ತಥಾಸ್ತು.

ವಸಂತ

ತಥಾಸ್ತು. ಒಂದು ದಿನವಲ್ಲ,
ವಸಂತದ ಪುಷ್ಪ ಶೋಭೆ ಒಂದು ವರ್ಷದ ಕಾಲ
ನಿನ್ನ ಮೈಯನ್ನು ಮುತ್ತಿ ವಿಕಾಸವಾಗಿರುವುದು.

೨

ಮಣಿಪುರದ ಅರಣ್ಯದಲ್ಲಿ ಶಿವಾಲಯ

ಅರ್ಜುನ

ನಾನು ನೋಡಿದ್ದು, ಅದೇನು ನಿಜವೊ ಮಾಟವೋ?
ನಿಬಿಡ ನಿರ್ಜನ ವನದಲ್ಲಿ ನಿರ್ಮಲ ಸರೋವರ;
ಅದೆಷ್ಟು ನಿಭೃತ ನಿರಾಲಯವೆಂದರೆ, ನನಗೆ ತೋರುತ್ತದೆ:
ನಿಸ್ತಬ್ಧ ಮಧ್ಯಾಹ್ನದಲ್ಲಿ ವನಲಕ್ಷ್ಮೀಗಣ
ಅಲ್ಲಿಗೆ ಸ್ನಾನಕ್ಕೆ ಹೋಗುತ್ತದೆಂದು; ಗಭೀರ ಪೂರ್ಣಿಮಾ ರಾತ್ರಿ
ಆ ಸುಪ್ತ ಸರಸಿಯ ದಟ್ಟವಾದ ಹಸುರಿನ
ಹುಲ್ಲದಡದಲ್ಲಿ ಶಂಕೆಯಿಲ್ಲದೆ ವಿಶ್ರಮಿಸಿಕೊಳ್ಳುತ್ತ
ನೆರಗುಜಾರಿ ಸುಖವಾಗಿ ನಿದ್ರಿಸುತ್ತದೆಂದು;

ಅಲ್ಲಿ ಮರಗಳ ಅಂತರಾಲದಲ್ಲಿ ಅಪರಾಹ್ಣದ ಕೊನೆಯಲ್ಲಿ
ಸಂಸಾರದ ಮರುಳಾಟ, ದುಃಖ ಸುಖ, ಏರು ಬೀಳು,
ಜೀವನದ ಅಸಂತೋಷ, ಅಸಂಪೂರ್ಣ ಆಶೆ,
ಮರ್ತ್ಯ ಮಾನವನ ಈ ಅನಂತ ದಾರಿದ್ರ್ಯ:
ಇವನ್ನೊಳಗೊಂಡ ಅಶೈಶವ ಜೀವನ ಕಥೆಯನ್ನು
ನೆನೆಯುತ್ತಿದ್ದೆನು. ಆಗ ದೊಡ್ಡ ಮರಗಳ ಕತ್ತಲಿಂದ
ಮೆಲ್ಲನೆ ಹೊರಬಂದು ಯಾರೋ ಆಕೆ ಸರೋವರದ
ಸೋಪಾನದ ಬಿಳಿಗಲ್ಲ ಹಾಸರೆಯ ಮೇಲೆ ನಿಂತಳು.
ಅದೆಂಥ ಅಪೂರ್ವರೂಪ! ಆ ಕೋಮಲ ಚರಣತಲದ
ಸೋಂಕಿನಿಂದ ಭೂಮಿ ಆನಂದದಿಂದ ಉಬ್ಬಬೇಕು.
ಉಷೆಯ ಕನಕಮೇಘ ಹೇಗೆ ನೋಡನೋಡುತ
ಒಂದುಗೂಡಿಕೊಂಡು ಪೂರ್ವಾಚಲದ ಶುಭ್ರಶಿರದ
ಅಕಲಂಕ ನಗ್ನ ಶೋಭೆಯನ್ನು ವಿಕಾಸಮಾಡುವುದೊ
ಹಾಗೆ ಅವಳು ಧರಿಸಿದ ವಸ್ತ್ರ ಸುಖಾವೇಶದಿಂದ
ಅವಳ ಅಂಗಲಾವಣ್ಯದಲ್ಲಿ ಬೆರೆಯಲೆಳಸುವಂತಿತ್ತು.
ಅವಳು ಸರೋವರದ ತೀರಕ್ಕೆ ಮೆಲ್ಲನೆ ಇಳಿದು
ಕುತೂಹಲದಿಂದ ತನ್ನ ಛಾಯೆಯನ್ನು ನೋಡಿಕೊಂಡು
ಬೆಚ್ಚಿ ಎದ್ದಳು; ಮರುಕ್ಷಣ ಮೆಲ್ಲನೆ ನಕ್ಕು
ಎಡತೋಳನ್ನು ಬೀಸಿ ವಿಲಾಸದಿಂದ
ತನ್ನ ಹೆರಳನ್ನು ಬಿಚ್ಚಿದಳು. ಆ ಮುಕ್ತಕೇಶ
ಅವಳಡಿಯ ಬಳಿ ಬಿದ್ದು ವಿಹ್ವಲವಾಯಿತು.
ಆ ಮೇಲೆ ಅವಳು ಸೆರಗನ್ನು ಓಸರಿಸಿ ತಲೆಬಾಗಿ,
ಆಲಿಂಗನ ಸುಖಕ್ಕಾಗಿ ಕೋಮಲ ಕಾತರವಾಗಿ
ಪ್ರೇಮದ ಕರುಣೆಯಿಂದ ತುಂಬಿರುವ ಬಾಹುಗಳನ್ನು
ನೋಡಿಕೊಂಡಳು, ತಲೆಯನ್ನು ಬಾಗಿ
ಪರಿಸ್ಫುಟವಾದ ತನ್ನ ದೇಹತಟದಲ್ಲಿ ಕಂಡ
ಯೌವನದ ಉನ್ಮುಖ ವಿಕಾಸವನ್ನು ದೃಷ್ಟಿಸಿದಳು.

ನವಗೌರತನುತಲದಲ್ಲಿ ಕೆಂಪೇರಿ ಕಂಡ
ನಿಡುನಾಚಿಕೆಯ ಹೊದರನ್ನು ದೃಷ್ಟಿಸಿ ನೋಡಿದಳು.
ಸರೋವರದಲ್ಲಿ ಎರಡು ಅಡಿಯನ್ನೂ ಅದ್ದಿ
ತನ್ನ ಚರಣಗಳ ಚೆಲುವನ್ನು ಈಕ್ಷಿಸಿದಳು.
ಅವಳ ಅಚ್ಚರಿಗೆ ಕೊನೆ ಇಲ್ಲ. ಅದನ್ನು ನೋಡಿದರೆ,
ಶ್ವೇತ ಕಮಲವೊಂದು ಕೋರಕ ವಯಸ್ಸನ್ನು
ಕಣ್ಮುಚ್ಚಿ ಕಳೆದು ಒಂದು ಉದಯದಲ್ಲಿ
ಆಗತಾನೇ ಪೂರ್ಣ ಶೋಭೆಯನ್ನು ಪಡೆದು,
ಕೊರಳನ್ನು ಚಾಚಿ ನೀಲ ಸರೋವರದ ಜಲದಲ್ಲಿ
ತನ್ನನ್ನು ಮೊದಲ ಸಲ ನೋಡಿಕೊಂಡು
ಬೆರಗಿನಿಂದ ದಿಟ್ಟಿಸುವಂತೆ ಅವಳೂ ತನ್ನನ್ನು
ಅದೇ ಮೊದಲ ಸಲ ನೋಡಿಕೊಂಡಂತಿತ್ತು.
ಮರುಕ್ಷಣದಲ್ಲಿ ಯಾವ ದುಃಖದಿಂದಲೊ ಏನೊ
ಮುಖದ ನಗೆ ಮರೆಯಿತು; ಕಣ್ಣು ಮ್ಲಾನವಾದುವು.
ಅವಳು ತನ್ನ ಕೇಶಪಾಶವನ್ನು ಎತ್ತಿಕಟ್ಟಿ
ದೇಹವನ್ನು ಸೆರಗಿನಿಂದ ಹೊದೆದು ನಿಟ್ಟುಸಿರು ಬಿಟ್ಟು,
ಸಂಜೆಯು ಹೊಂಬಣ್ಣ ಮುಖವನ್ನು ಮ್ಲಾನ ಮಾಡಿ
ಕತ್ತಲ ಇರುಳೆದುರಲ್ಲಿ ಮೃದುಪದದಿಂದ ಮರೆಯುವಂತೆ,
ಮೆಲ್ಲನೆ ಹೊರಟುಹೋದಳು. ಧರಣಿ ತನ್ನೈಸಿರಿಯನ್ನು
ಹೊರಕ್ಕೆ ಹಾಕಿತೆಂದು ನಾನು ಯೋಚಿಸಿದೆನು.
ಆಸೆಯು ಪರಾಕಾಷ್ಠೆ ಹೊಳೆದು ಮರೆದಂತಾಯಿತು.
ಆ ಪೂರ್ಣ ಸೌಂದರ್ಯದ ಸನ್ನಿಧಿಯಲ್ಲಿ,
ಸಿಂಹವಾಹನೆಯ ಭುವನ ವಾಂಛಿತವಾದ
ಅರುಣ ಚರಣತಲದಲ್ಲಿ ಮೃಗರಾಜ ಸಿಂಹ ಹೇಗೆ ಹಾಗೆ,
ಎಷ್ಟು ಯುದ್ಧ ಎಷ್ಟು ಹಿಂಸೆ ಎಷ್ಟು ಆಟೋಪ
ಪುರುಷನ ಶೌರ್ಯದ ಹೆಮ್ಮೆ ವೀರನ ನಿತ್ಯಕೀರ್ತಿಯ ಆಸೆ
ಎಷ್ಟು ಅದು ಶಾಂತವಾಗಿ ಭೂಮಿಯಲ್ಲಿ ಕೆಡೆಯುವುದು

ಎಂದು ನಾನೆಣಿಸಿದೆನು. ಇನ್ನೊಮ್ಮೆ ಏನಾದರೂ—
ಯಾರು ಬಾಗಿಲು ತಳ್ಳುವುದು ?

ಬಾಗಿಲು ತೆರೆಯುತ್ತದೆ

ಇದೇನು ! ಅದೆ ಆಕಾರ !
ಶಾಂತವಾಗು ಓ ಹೃದಯವೇ! ನನ್ನನ್ನು ನೋಡಿದ್ದರಿಂದ
ಏನೂ ಭಯಪಡುವುದು ಬೇಡ, ವರಾನನೇ.
ನಾನು ಕ್ಷತ್ರಕುಲ ಜಾತನು : ಭಯ ಭೀತ ದುರ್ಬಲರ
ಭಯ ನಿವಾರಕನು.

ಚಿತ್ರಾಂಗದಾ

ಆರ್ಯ, ನೀನು ನನ್ನ ಅತಿಥಿ ;
ಈ ದೇವಾಲಯ ನನ್ನ ಆಶ್ರಮ. ಯಾವ ಸತ್ಕಾರದಿಂದ
ನಿನ್ನನ್ನು ಸಂತೋಷಪಡಿಸಲಿ ಎಂದು ನಿನ್ನನ್ನು ಬೇಡುವುದು
ಹೇಗೆ ಅದನ್ನು ಅರಿಯದೆ ಇದೇನೆ.

ಅರ್ಜುನ

ಓ ಸುಂದರಿ
ನಿನ್ನ ದರ್ಶನದಿಂದಲೇ ಅತಿಥಿ ಸತ್ಕಾರ ಆಯಿತು.
ಈ ಉಪಚಾರದ ಮಾತೇ ನನ್ನ ಸೌಭಾಗ್ಯ.
ಅಪರಾಧವಾಗದಿದ್ದರೆ ಒಂದು ಪ್ರಶ್ನೆ ಕೇಳಬೇಕು ಎಂಬ
ಬಯಕೆಯಿಂದ ನನ್ನ ಮನಸ್ಸು ಕುತೂಹಲವಾಗಿದೆ.

ಚಿತ್ರಾಂಗದಾ

ನಿಸ್ಸಂಕೋಚವಾಗಿ ಕೇಳಬೇಕು.

ಅರ್ಜುನ

ಓ ಶುಚಿಸ್ಮಿತೆ !
ಯಾವ ಕಠೋರ ವ್ರತಕ್ಕಾಗಿ ಜನಹೀನ ದೇವಾಲಯದಲ್ಲಿ

ಇಂಥ ರೂಪರಾಶಿಯನ್ನು ವೃಥಾ ಹರಿಯಬಿಟ್ಟು
ಹತಭಾಗ್ಯರಾದ ಪುರುಷರನ್ನು ನೀನು ವಂಚಿಸಿದೀಯೆ?

ಚಿತ್ರಾಂಗದಾ

ಗುಪ್ತವಾದ ಒಂದು ಬಯಕೆಯನ್ನು ಸಾಧಿಸಲೆಂದು
ಒಂದೇ ಮನದಿಂದ ಶಿವಪೂಜೆ ಮಾಡುತಿದೇನೆ.

ಅರ್ಜುನ

ಆಹಾ
ಎಲ್ಲ ಲೋಕ ಬಯಸುವ ವಸ್ತುವಾಗಿರುವ ನೀನು
ಬಯಸಬಲ್ಲುದು ಏನಿದೆ? ಓ ಸುದರ್ಶನೆ,
ಉದಯಗಿರಿಯಿಂದ ಅಸ್ತಾಚಲದವರೆಗೆ
ಎಲ್ಲ ಧರಣಿಯನ್ನು ನಾನು ಸುತ್ತಿದೇನೆ.
ಸಪ್ತ ದ್ವೀಪಗಳಲ್ಲಿ ಎಲ್ಲಿ ಯಾವುದು ಇದೆ,
ದುರ್ಲಭವಾದುದು, ಸುಂದರವಾದುದು, ಅಚಿಂತ್ಯ ಮಹತ್ವದ್ದು,
ಎಲ್ಲವನ್ನೂ ಕಣ್ಣಾರೆ ನೋಡಿದೇನೆ.
ಏನು ಬಯಸುವೆ, ಯಾರನ್ನು ಬಯಸುವೆ, ಹೇಳಿದರೆ
ನನ್ನಿಂದ ಸುದ್ದಿ ತಿಳಿಯುವುದು.

ಚಿತ್ರಾಂಗದಾ

ನಾನು ಯಾರನ್ನು
ಬಯಸುವೆನೊ ಅವನು ತ್ರಿಭುವನ ಪರಿಚಿತನು.

ಅರ್ಜುನ

ಈ ಲೋಕದ ಆ ಬಹು ಪುಣ್ಯಶಾಲಿ ಯಾರು?
ಅಮರವಾಂಛಿತವಾದ ನಿನ್ನ ಮನೋರಾಜ್ಯದಲ್ಲಿ
ದುರ್ಲಭವಾದ ಪೀಠವನ್ನು ಪಡೆದುಕೊಂಡಿರುವುದು
ಯಾರ ಯಶೋರಾಶಿ? ಅವನ ಹೆಸರನ್ನು ಹೇಳು.
ಕೇಳಿ ಕೃತಾರ್ಥನಾಗುತ್ತೇನೆ.

ಚಿತ್ರಾಂಗದಾ

ಆತನು
ಸರ್ವಶ್ರೇಷ್ಠ ನರಪತಿ ಕುಲದಲ್ಲಿ ಹುಟ್ಟಿದಾತನು ;
ಸರ್ವಶ್ರೇಷ್ಠ ವೀರನು.

ಅರ್ಜುನ

ಮಿಥ್ಯಾಖ್ಯಾತಿ ಬೆಳೆದೇಳುತ್ತದೆ,
ಬಾಯಿಂದ ಬಾಯಿಗೆ, ಮಾತಿಂದ ಮಾತಿಗೆ :
ಕ್ಷಣ ಸ್ಥಾಯಿ ಮಂಜು ಸೂರ್ಯನು ಏಳದಿರುವ ವೇಳೆ
ಉಷೆಯನ್ನು ವಂಚಿಸಿ ಮುಚ್ಚುವ ರೀತಿ.
ಅಚ್ಚಮನದ ಬಾಲೆ, ದುರ್ಲಭಸೌಂದರ್ಯಸಂಪತ್ತಿನಿಂದ
ಸುಳ್ಳಿನ ಉಪಾಸನೆಮಾಡಬೇಡ; ಹೇಳು ಕೇಳೋಣ
ಯಾರು ಧರಣಿಯ ಸರ್ವಶ್ರೇಷ್ಠಕುಲದ ಸರ್ವಶ್ರೇಷ್ಠ ವೀರ ?

ಚಿತ್ರಾಂಗದಾ

ಪರಕೀರ್ತಿ ಸಹಿಸದ ನೀನು ಯಾರು, ಸಂನ್ಯಾಸಿ ?
ಯಾರರಿಯರು ಈ ಭುವನ ಮಧ್ಯದಲ್ಲಿ
ರಾಜವಂಶಚೂಡವಾದ ಕುರುವಂಶವನ್ನು ?

ಅರ್ಜುನ

ಕುರುವಂಶ !

ಚಿತ್ರಾಂಗದಾ

ಯಾರು ಅಕ್ಷಯ ಯಶಸ್ವಿ, ವೀರೇಂದ್ರ ಕೇಸರಿ,
ಅವನ ಹೆಸರನ್ನು ಕೇಳಿರುವೆಯಾ ಹೇಗೆ ?

ಅರ್ಜುನ

ಹೇಳು, ಭದ್ರೆ, ನಿನ್ನ ಬಾಯಿಂದ ಕೇಳುವೆನು.

ಚಿತ್ರಾಂಗದಾ

ಅರ್ಜುನ: ಗಾಂಡೀವಧರ ; ಭುವನ ವಿಜಯಿ.
ಅಖಿಲ ಜಗತ್ತಿನಿಂದ ಆ ಅಕ್ಷಯನಾಮವನ್ನು ಕಸಿದು

ಜತನವಾಗಿ ಮುಚ್ಚಿಟ್ಟು ಈ ಕುಮಾರೀ ಹೃದಯವನ್ನು
ತುಂಬಿಕೊಂಡಿದೇನೆ. ಓ ಬ್ರಹ್ಮಚಾರಿ,
ನೀನೇಕೆ ಅಧೀರನಾದೆ? ಹಾಗಾದರೆ ಇದು ಸುಳ್ಳೇ?
ಅರ್ಜುನನ ಖ್ಯಾತಿ ಸುಳ್ಳೆ? ಈಗಲೇ ಹೇಳು.
ಅದು ಸುಳ್ಳಾದರೆ ನನ್ನ ಹೃದಯವನ್ನು ಬಿರಿದು
ಆ ಹೆಸರನ್ನು ಕಿತ್ತೆಸೆಯುವೆನು. ಶೂನ್ಯದಿಂದ ಶೂನ್ಯಕ್ಕೆ
ಬಾಯಿಂದ ಬಾಯಿಗೆ ಹಾರುತ್ತ ಅದು ಸುಳಿಯಲಿ.
ನಾರಿಯ ಹೃದಯದಲ್ಲಿ ಅದಕ್ಕೆ ಸ್ಥಾನವಿಲ್ಲ.

ಅರ್ಜುನ

ವರಾಂಗನೆ!
ಆ ಅರ್ಜುನ, ಆ ಪಾಂಡವ, ಆ ಗಾಂಡೀವಧರ,
ಆ ಭಾಗ್ಯವಾನ್ ನಿನ್ನ ಚರಣದಲ್ಲಿ ಶರಣಾಗತನು.
ಅವನ ಹೆಸರು, ಅವನ ಖ್ಯಾತಿ, ಶೌರ್ಯ ವೀರ್ಯ,
ಮಿಥ್ಯವಾಗಲಿ ಸತ್ಯವಾಗಲಿ, ಯಾವ ದುರ್ಲಭ ಲೋಕದಲ್ಲಿ
ಅವನಿಗೆ ಸ್ಥಾನದಾನ ಮಾಡಿದೀಯೊ ಅಲ್ಲಿಂದ
ಅವನನ್ನು ಚ್ಯುತನಾಗಿ ಮಾಡದಿರು, ಪುಣ್ಯವೆಚ್ಚವಾಗಿ
ಸ್ವರ್ಗಸುಖ ಮುಗಿದ ಹತಭಾಗ್ಯನಂತೆ.

ಚಿತ್ರಾಂಗದಾ

ನೀನು ಪಾರ್ಥ?

ಅರ್ಜುನ

ಹೌದು. ನಾನು ಪಾರ್ಥ. ನಿನ್ನ ಹೃದಯದ್ವಾರದಲ್ಲಿ
ಪ್ರೇಮಾರ್ತನಾಗಿರುವ ಅತಿಥಿ.

ಚಿತ್ರಾಂಗದಾ

ಕೇಳಿ ಉಂಟು, ಅರ್ಜುನನು
ದ್ವಾದಶವರ್ಷ ಬ್ರಹ್ಮಚರ್ಯವನ್ನು ಪಾಲಿಸುತ್ತಿರುವನೆಂದು.
ಆ ವೀರನು ಒಬ್ಬ ಕಾಮಿನಿಯನ್ನು ಬಯಸಿ
ವ್ರತಭಂಗ ಮಾಡಿಯಾನೆ! ಸಂನ್ಯಾಸಿ, ನೀನು ಪಾರ್ಥನೆ?

ಅರ್ಜುನ

ನೀನು ಮುರಿದೆ ನನ್ನ ವ್ರತವನ್ನು, ಚಂದ್ರನೆದ್ದು
ನಿಮಿಷದಲ್ಲಿ ನಿಶೀಥದ ಯೋಗನಿದ್ರಾಂಧಕಾರವನ್ನು
ಮುರಿದು ಬಿಡುವಂತೆ.

ಚಿತ್ರಾಂಗದಾ

ಛೀ, ಪಾರ್ಥ, ಛೀ,
ನಾನು ಏನು ? ನನ್ನದೇನಿದೆ ? ನೀನು ಏನು ಕಂಡೆ ?
ನನ್ನನ್ನೇನೆಂದು ತಿಳಿದೆ ? ಯಾರಿಗಾಗಿ ನಿನ್ನನ್ನೇ ಮರೆತೆ ?
ಮುಹೂರ್ತ ಮಾತ್ರದಲ್ಲಿ ಸತ್ಯವನ್ನು ತೊರೆದು
ಯಾರಿಗಾಗಿ ಅರ್ಜುನನನ್ನು ಅನರ್ಜುನ ಮಾಡುವೆ ?
ನನಗಾಗಿ ಅಲ್ಲ. ಈ ನೀಲೋತ್ಪಲ ನಯನಗಳಿಗಾಗಿ
ಸವ್ಯಸಾಚಿ ಅರ್ಜುನನು ತನ್ನ ಎರಡು ಕೈಗಳಿಂದಲೂ
ಸತ್ಯದ ಕಟ್ಟುಗಳನ್ನು ಕಿತ್ತೊಗೆದು ಬಂದು
ಬೆಣ್ಣೆಯಂತ ಈ ತೋಳುಗಳಲ್ಲಿ ಸಿಕ್ಕಿಬಿದ್ದನೇ ?
ಪ್ರೇಮದ ಮರ್ಯಾದೆ ಎತ್ತ ಹೋಯಿತು ?
ಎಲ್ಲಿ ಹೋಗಿಬಿದ್ದಿತು ನಾರಿಯ ಗೌರವ ?
ಆಹಾ ನನ್ನನ್ನು, ನನ್ನ ಈ ಅಲ್ಪ ದೇಹ,
ಮೃತ್ಯುಹೀನ ಆತ್ಮವನ್ನು ಆದರ ಕ್ಷಣಸ್ಥಾಯಿ ಛದ್ಮವೇಷ
ಅತಿಕ್ರಮಿಸಿತು. ಈಗತಾನೆ ತಿಳಿದೆನು
ನಿನ್ನ ಶೌರ್ಯದ ಖ್ಯಾತಿ ಮಿಥ್ಯ ಎಂಬುದನ್ನು.

ಅರ್ಜುನ

ಖ್ಯಾತಿ ಮಿಥ್ಯಾ, ವೀರ್ಯ ಮಿಥ್ಯಾ, ಈಗ ಅರಿತೆನು.
ಈಗ ನನಗೆ ಸಪ್ತ ಲೋಕ ಸ್ವಪ್ನವೆನಿಸಿದೆ.
ಕೇವಲ ನೀನು ಒಬ್ಬಳು ಪೂರ್ಣ. ನೀನೇ ಎಲ್ಲ.
ವಿಶ್ವದ ಐಶ್ವರ್ಯ ನೀನು; ಒಬ್ಬಳೆ ನಾರಿ ನೀನು.
ನೀನು ಸಕಲ ದೈನ್ಯದ ಮಹದಂತವಾದೆ;

ಸಕಲ ಕರ್ಮಕ್ಕೆ ನೀನು ವಿಶ್ರಾಮ ರೂಪಿಣೀ ;
ಹೇಗೋ ಏನೋ ಅಕಸ್ಮಾತ್ ನಿನ್ನನ್ನು ನೋಡಿ
ನಾನು ಅರಿತೆನಾದೆನು: ಯಾವ ಆನಂದ ಕಿರಣದಲ್ಲಿ,
ಪ್ರಥಮ ಪ್ರತ್ಯೂಷದಲ್ಲಿ, ಅಂಧಕಾರ ಮಹಾರ್ಣವದಲ್ಲಿ,
ಸೃಷ್ಟಿ ಕಮಲವು ದಿಕ್ಕು ದಿಕ್ಕಿನಲ್ಲಿ ಎದ್ದಿತು ;
ಒಂದು ಮುಹೂರ್ತದ ಮಧ್ಯೆ ಕಣ್ಣು ತೆರೆಯಿತು.
ಉಳಿದ ಎಲ್ಲವನ್ನೂ ಪಲಪಲವಾಗಿ ತಿಲತಿಲವಾಗಿ
ಬಹುದಿನದನಂತರವೇ ಅರಿಯಬಹುದು ;
ಆದರೆ ನಿನ್ನನ್ನು ಯಾವಾಗ ನೋಡಿದೆನೋ ಆಗಲೇ
ನಿನ್ನನ್ನು ಕುರಿತು ಎಲ್ಲವನ್ನೂ ತಿಳಿಯಲು ಆಯಿತು.
ಆದರೂ ಕೊನೆ ಮುಟ್ಟಲ್ಲ. ಕೈಲಾಸ ಶಿಖರದಲ್ಲಿ ಒಮ್ಮೆ
ಮೃಗಯಾಶ್ರಾಂತನಾದ ನಾನು ಬಳಲಿ ಬಾಯಾರಿ
ನಡುಹಗಲು ಹೂವಿಂದ ಸೊಗಸಿದ ಮಾನಸ ಸರಸಿಯ
ತಟವನ್ನು ಸಾರಿದೆನು. ಸುರಸರಸಿಯ ನೀರನ್ನು ನೋಡಿದ
ಆ ಕ್ಷಣವೇ ಕಣ್ಣಿಗೆ ಅದರ ಅನಂತ ಅತಲ
ಸ್ವಚ್ಛ ಜಲದ ಎಷ್ಟು ಆಳಕ್ಕೂ ಕಂಡಿತು.
ಮಧ್ಯಾಹ್ನ ರವಿರಶ್ಮಿ ರೇಖೆಗಳು, ಸ್ವರ್ಣ ನಳಿನಗಳ
ಸುವರ್ಣಮೃಣಾಲದ ಜೊತೆ ಬೆರೆತು,
ಅಗಾಧ ಅಸೀಮಕ್ಕೆ ಇಳಿದವು; ಜಲದ ಹಿಲ್ಲೋಲದಲ್ಲಿ
ಲಕ್ಷಕೋಟಿ ಅಗ್ನಿಮಯಿ ನಾಗಿನಿಯರಂತೆ
ಅಕ್ರವಕ್ರವಾಗಿ ಬಳುಕಿದವು. ಭಗವಾನ್ ಸೂರ್ಯನು
ಕರ್ಮಕ್ಲಾಂತ ಜನ್ಮಶ್ರಾಂತ ಮರ್ತ್ಯರಿಗೆ
ಅನಂತ ಶೀತಲ ಸುಂದರ ಮರಣ ಎಲ್ಲಿದೆ ಎಂಬುದನ್ನು
ಸಹಸ್ರ ಅಂಗುಲಿಗಳಿಂದ ನಿರ್ದೇಶಿಸಿ ತೋರಿದಂತಿತ್ತು.
ಆ ಸ್ವಚ್ಛ ಅತಲತೆಯನ್ನು ನಿನ್ನಲ್ಲಿ ನಾನು
ನೋಡುತ್ತಿದೇನೆ. ನಾಲ್ಕು ದಿಕ್ಕಿನಿಂದ
ದೇವರ ಅಂಗುಲಿ ನನಗೆ ತೋರಿಸುವಂತಿದೆ

ಈ ನಿನ್ನ ಅಲೌಕಿಕ ದೀಪ್ತಿಯ ಮಧ್ಯೆ
ಕೀರ್ತಿಕ್ಲಿಷ್ಟ ಜೀವನದ ಪೂರ್ಣನಿರ್ವಾಪಣವನ್ನು.

ಚಿತ್ರಾಂಗದಾ

ನಾನಲ್ಲ; ನಾನಲ್ಲ; ಹಾ, ಪಾರ್ಥ, ಹಾ,
ದೇವರ ಎಂಥ ಮೋಸ! ನಡೆ, ನಡೆ, ಹಿಂತಿರುಗು.
ಹಿಂದಿರುಗು, ಓ ವೀರ. ಮಿಥ್ಯೆಗೆಯ್ಯಬೇಡ
ನಿನ್ನ ಉಪಾಸನೆಯನ್ನು; ನಿನ್ನ ಶೌರ್ಯವೀರ್ಯಮಹತ್ವವನ್ನು
ಮಿಥ್ಯೆಯ ಪಾದದಲ್ಲಿ ಹಾಕಬೇಡ. ನಡೆ ಹಿಂದಿರುಗು.

೩

ಮರದಡಿ ಚಿತ್ರಾಂಗದಾ

ಚಿತ್ರಾಂಗದಾ

ಹಾ, ಹಾ, ಇದನ್ನು ಹಿಂದಿರುಗಿಸಲು ಸಾಧ್ಯವೇ?
ತೃಷೆಯಿಂದ ಆರ್ತವಾಗಿ ಕಂಪಿತವಾಗಿ
ಕಿಡಿಯನ್ನುಗುಳುವ ಹೋಮಾಗ್ನಿ ಶಿಖಿಯಂತಿರುವ
ವೀರಹೃದಯದ ನಡುನಡುಗುವ ಈ ಉತ್ಕಂಠೆಯನ್ನು?
ಅವನಾ ಕಣ್ಣ ನೋಟ ಆ ಅಂತರ್ಯದ ತೋಳೆಂಬಂತೆ
ನನ್ನನ್ನು ಎಳೆದೊಯ್ಯಲು ಬಂದಿವೆ. ಉತ್ತಪ್ತ ಹೃದಯ
ಸರ್ವಾಂಗವನ್ನು ಭೇದಿಸಿಕೊಂಡು ಹೊರಬೀಳ ಬಯಸುತ್ತಿದೆ.
ಅದರ ಕ್ರಂದನ ಧ್ವನಿ ಪ್ರತಿ ಅಂಗದಲ್ಲಿ ಕೇಳ ಬಂದಂತಿದೆ.
ಈ ದಾಹವನ್ನು ತಡೆಯುವುದು ಸಾಧ್ಯವೇ?

ವಸಂತ ಮದನರ ಪ್ರವೇಶ

ಓ ಅನಂಗದೇವ ಇದಾವ ಸೌಂದರ್ಯಶಿಖಿಯಲ್ಲಿ
ನನ್ನನ್ನು ಮುತ್ತಿರುವೆ? ನಾನೇ ಉರಿಯುತ್ತಿದೇನೆ; ಅಂತೇ
ಉರಿಸುತ್ತಿದೇನೆ.

ಮದನ

ಹೇಳು, ತನ್ವಿ, ನಿನ್ನೆಯ ವಿವರವನ್ನು.
ನಾನೆಚ್ಚ ಪುಷ್ಪಶರದಲ್ಲಿ ಕೆಲಸ ಸಾಧಿಸಿತೆ?
ಕೇಳಲು ನನಗಾಸೆ.

ಚಿತ್ರಾಂಗದಾ

ನಿನ್ನೆ ಸಂಜೆಯಲ್ಲಿ
ಸರಸಿಯ ತೃಣಪುಂಜ ತೀರದಲ್ಲಿ, ಉದುರಿದ
ವಸಂತ ಪುಷ್ಪಗಳ ಪುಷ್ಪಶಯ್ಯೆ ಹಾಸಿದ್ದೆನು;
ನೈ ಸೋತು ಅನ್ಯಮನಸ್ಕಳಾಗಿ ಮಲಗಿದ್ದೆನು ;
ಬಳಲಿದ ತಲೆಯನ್ನು ಎಡತೋಳ ಮೇಲಿಟ್ಟು
ಹಿಂದಿನ ದಿನದ ಮಾತನ್ನು ನೆನೆಯುತ್ತಿದ್ದೆನು.
ಯಾವ ಸ್ತುತಿಯನ್ನು ಅರ್ಜುನನ ಬಾಯಿಂದ
ಕೇಳಿದ್ದೆನೋ ಅದನ್ನು ನೆನಪಿಗೆ ತರುತ್ತಿದ್ದೆನು.
ದಿನದ ಸೇರಿಸಿಟ್ಟ ಅಮೃತದಿಂದ ಒಂದೊಂದು
ಬಿಂದುವನ್ನು ತೆಗೆದುಕೊಂಡು ಸವಿಯುತ್ತಿದ್ದೆನು.
ಗಿಂದಿನ ವಿಷಯವನ್ನು ಗತಜನ್ಮದ ಮಾತೆಂಬಂತೆ
ಮರೆತಿದ್ದೆನು : ನಾನು ರಾಜ ಕನ್ಯೆ ಅಲ್ಲ ಎಂಬಂತೆ
ನನಗೆ ಪೂರ್ವಪರ ಇಲ್ಲ ಎಂಬಂತೆ, ನಾನು
ಧರಾತಲದಲ್ಲಿ ಒಂದೇ ದಿನದಲ್ಲಿ ಅರಳಿದ
ಮಾತೃಹೀನ ಪಿತೃಹೀನ ಅರಣ್ಯಪುಷ್ಪ ಎಂಬಂತೆ.
ಬರಿಯ ಒಂದು ಹೊತ್ತೇ ಪೂರ್ಣಾಯುಸ್ಸು;
ಅಷ್ಟರಲ್ಲೇ ಕೇಳಬೇಕು ಭ್ರಮರ ಗುಂಜನ ಗೀತಿ ;
ವನವನಾಂತರದ ಆನಂದದ ಮರ್ಮರ; ಆಮೇಲೆ,
ನೀಲಾಂಬರದಿಂದ ಮೆಲ್ಲನೆ ಕಣ್ಣು ಬಾಗಿಸಿ ಅದು
ಕೊರಳನ್ನು ಚಾಚಿ ವಾಯುಸ್ಪರ್ಶದ ಭರದಲ್ಲಿ
ಕ್ರಂದನವೂ ಇಲ್ಲದೆ ಉರುಳಿ ಕಳೆದು ಹೋಗಬೇಕು.

ಆ ಮಧ್ಯೆ ಆ ಕುಸುಮದ ಚರಿತ್ರೆ ಆದಿ ಅಂತ್ಯ ಇಲ್ಲದೆ
ಪೂರಯಿಸುವುದು.

ವಸಂತ

ಒಂದೇ ಪ್ರಭಾತದಲ್ಲಿ
ಅರಳುತ್ತದೆ ಅನಂತ ಜೀವನ ಓ ಸುಂದರಿ.

ಮದನ

ಸಂಗೀತದ ಒಂದು ಕ್ಷಣಿಕ ತಾನದಲ್ಲಿ ಯಾವ ರೀತಿ
ಅಂತ್ಯವಿಲ್ಲದ ಅರ್ಥ ಝೇಂಕರಿಸಿ ಮೊರೆದೇಳುತ್ತದೆ
ಆ ರೀತಿ. ಹೇಳು, ಆ ಮೇಲೆ?

ಚಿತ್ರಾಂಗದಾ

ನೆನೆಯುತ್ತ ನೆನೆಯುತ್ತ
ದಕ್ಷಿಣಾನಿಲದಲ್ಲಿ ನಿದ್ರೆಯ ಹಿಲ್ಲೋಲ
ಸರ್ವಾಂಗವನ್ನು ಸೋಕಿದವು. ಅರಳಿದ ಮಾಲತೀಲತೆ
ಸಪ್ತಪರ್ಣದ ಶಾಖೆಯಿಂದ ನನ್ನ ಆಲಸ್ಯ ಆವೇಶದಲ್ಲಿ
ನನ್ನ ಗೌರತನುವಿಗೆ ನಿಶ್ಶಬ್ದ ಚುಂಬನವನ್ನು
ಕಳುಹುತ್ತಿತ್ತು. ಹೂಗಳು ಕೆಲವು ತಲೆಯ ಬಳಿ
ಕೆಲವು ಕಾಲಬಳಿ ಕೆಲವು ಸ್ತನ ತಟ ಮೂಲದಲ್ಲಿ
ಬಿದ್ದು ತಮ್ಮ ಮರಣಶಯ್ಯೆಯನ್ನು ಹಾಸಿಕೊಂಡುವು.
ಎಷ್ಟೋ ಹೊತ್ತು ಕದಲದೆ ಇದ್ದೆನು. ಆವೇಳೆ
ನಿದ್ರೆಯ ಮಧ್ಯೆ ಯಾವಾಗಲೋ ಅರಿತೆನು
ಯಾರದೋ ಮೋಹಗೊಂಡ ಕಣ್ಣುಗಳ ನೋಟ
ಹತ್ತು ಬೆರಳಂತೆ ತೀವ್ರ ಲಾಲಸೆಯಿಂದ
ನನ್ನ ನಿದ್ರಾಲಸ ದೇಹವನ್ನು ಸೋಕಿದುದನ್ನು.
ಬೆಚ್ಚಿ ನಿದ್ರೆ ಅರಿತು ಎಚ್ಚತ್ತೆನು. ನೋಡಿದೆನು
ಸಂನ್ಯಾಸಿ ಕಾಲಬಳಿ ನಿಶ್ಚಲ ಪ್ರತಿಮೆಯಂತೆ
ಎವೆಯಿಕ್ಕದೆ ದೃಷ್ಟಿಸುತ್ತ ನಿಂತಿರುವುದನ್ನು.
ಪೂರ್ವಾಚಲದಿಂದ ಮೆಲ್ಲಮೆಲ್ಲನೆ ಸರಿದು ಬಂದು

ಪಶ್ಚಿಮಕ್ಕೆ ಬಾಗಿದ ದ್ವಾದಶಿಯ ಚಂದ್ರನು
ತನ್ನ ಸಮಸ್ತ ಹಿಮಾಂಶುರಾಶಿಯನ್ನೂ ನನ್ನ
ಬರಿಮೈಯ್ಯ ಅಮ್ಲಾನ ನೂತನ ಸೌಂದರ್ಯದ ಮೇಲೆ
ಚೆಲ್ಲಿದಂತೆ ಆಯಿತು. ಪುಷ್ಪಗಂಧ ಪೂರ್ಣ ತರುತಲ;
ಝಿಲ್ಲೀರವ ತಂದ್ರ ಮುಗ್ನ ನಿಶೀಥಿನಿ ;
ಸ್ವಚ್ಛ ಸರೋವರದಲ್ಲಿ ಅಕಂಪಿತ ಚಂದ್ರಕರಚ್ಛಾಯೆ;
ಸುಪ್ತವಾಯು. ತಿಂಗಳ ಬೆಳಕು ತಲೆಯಲ್ಲಿ ಹೊತ್ತೊಯ್ದು
ಕೋಮಲವಾದ ಒತ್ತಾದ ರಾಶಿ ರಾಶಿ ಕತ್ತಲ
ಪಲ್ಲವದ ಭಾರದಿಂದ ಅಡವಿ ಸ್ತಂಭಿತವಾಗಿತ್ತು.
ಹಾಗೆಯೇ ಛಾಯಾ ಸಹಚರ ದಂಡಧಾರಿ ಬ್ರಹ್ಮಚಾರಿ
ದೀರ್ಘಕಾಯ ವನಸ್ಪತಿಯಂತೆ ಚಿತ್ರಾರ್ಪಿತನಂತೆ
ನಿಂತಿದ್ದನು. ನಿದ್ರೆ ಎಚ್ಚರವಾದ ಆ ಕ್ಷಣ
ನಾಲ್ಕು ದಿಕ್ಕು ನೋಡಲಾಗಿ ಯಾವಾಗ
ಯಾವ ವಿಸ್ಮೃತ ಪ್ರದೋಷದಲ್ಲಿ ಜೀವನವನ್ನು ಬಿಟ್ಟು
ಅಪೂರ್ವ ಮೋಹನಿದ್ರಾಲೋಕದಲ್ಲಿ
ಜನಶೂನ್ಯ ಮ್ಲಾನ ಜ್ಯೋತ್ಸ್ನಾ ವೈತರಣೀ ತೀರದಲ್ಲಿ
ಸ್ವಪ್ನ ಜನ್ಮಪಡೆದೆನೋ ಎನಿಸಿತು. ಎದ್ದು ನಿಂತೆನು.
ಹುಸಿ ನಾಚಿಕೆ, ಸಂಕೋಚ, ಸಡಿಲವಾದ ವಸನದಂತೆ
ಕಾಲಿಡೆಗೆ ಜಾರಿದುವು. ಕೇಳಿದೆನು: "ಪ್ರಿಯೆ ಪ್ರಿಯತಮೇ."
ಈ ಗಂಭೀರ ಆಹ್ವಾನದಿಂದ ನನ್ನ ದೇಹದ ಒಳಗೆ
ಜನ್ಮ ಜನ್ಮ ಶತ ಜನ್ಮ, ಎಚ್ಚತ್ತು ನಿಂತವು.
ಹೇಳಿದೆನು: "ತೆಗೆದುಕೊ ; ಏನಿದೆ ಅದೆಲ್ಲವನ್ನು
ಕೋ, ಜೀವವಲ್ಲಭ." ಬಾಹುಗಳನ್ನು ನೀಡಿದೆನು.
ಚಂದ್ರನು ವನದಲ್ಲಿ ಮರೆಯಾದನು. ಮೇದಿನಿ
ಅಂಧಕಾರದಲ್ಲಿ ದುಮುಕಿತು. ಸ್ವರ್ಗ ಮರ್ತ್ಯ, ದೇಶ ಕಾಲ,
ದುಃಖ ಸುಖ, ಜೀವನ ಮರಣ, ಸ್ತಬ್ಧವಾದವು,
ಸಹಿಸಲಾಗದ ರೋಮಾಂಚದಲ್ಲಿ. ಪ್ರಭಾತದ

ಪ್ರಥಮ ಕಿರಣದಲ್ಲಿ, ಹಕ್ಕಿಗಳ ಮೊದಲ ಗೀತದಲ್ಲಿ,
ಎಡಕೈ ಊರಿ ಮೆಲ್ಲನೆ ಹಾಸಿಗೆಯಲ್ಲೆದ್ದು ಕುಳಿತೆನು ;
ಸುಖಸುಪ್ತನಾದ ವೀರನನ್ನು ದೃಷ್ಟಿಸಿ ನೋಡಿದೆನು ;
ಅವನ ತುಟಿಯೆಡೆ, ಉದಯದ ಚಂದ್ರಕಲೆಯಂತೆ,
ರಜನಿಯ ಆನಂದದ ಶೀರ್ಣ ಅವಶೇಷವಾಗಿ
ಸೊರಗಿದ ನಗೆ ಒಂದಿತ್ತು. ಮಲಗಿದ್ದ ಅವನ
ಉನ್ನತ ಲಲಾಟದ ಮೇಲೆ ಅರುಣ ಪ್ರಕಾಶ
ಮರ್ತ್ಯ ಲೋಕದಲ್ಲಿ ನವ ಉದಯ ಪರ್ವತದಲ್ಲಿ
ನವಕೀರ್ತಿ ಸೂರ್ಯ ಪ್ರಕಾಶ ಹೇಗೆ ಹಾಗೆ ಹೊಳೆಯಿತು.
ಹಾಸಿಗೆ ಉಳಿದು ನಿಟ್ಟುಸಿರು ಬಿಟ್ಟು ಎದ್ದೆನು.
ನಿದ್ರಿಸುವ ಮುಖದಿಂದ ಸೂರ್ಯ ರಶ್ಮಿಯನ್ನು ಮರಸುವಂತೆ
ಸಾವಧಾನವಾಗಿ ಮಾಲತೀಲತಾಜಾಲವನ್ನು ಎಳೆದೆನು.
ನಾಲ್ಕು ಕಡೆಯೂ ನೋಡಿದೆನು. ಅದೇ ಆ ಪರಿಚಿತ
ಪ್ರಾಚೀನ ಪೃಥ್ವಿ. ಮತ್ತೆ ನನಗೆ ನನ್ನರಿವಾಯಿತು.
ನವಪ್ರಭಾತದ ಶಿರೀಷ ಕುಸುಮದಿಂದ ಹರಡಿದ
ಹುಲ್ಲಿನ ವನಸ್ಥಲದ ಮೇಲೆ, ತನ್ನ ನೆರಳಿಗೆ ಹೆದರುವ
ಹರಿಣಿ ಹೇಗೆ ಹಾಗೆ, ಹೊರಟು ಓಡಿಬಂದೆನು.
ವಿಜನವಿತಾನ ತಲದಲ್ಲಿ ಕುಳಿತು ಕರಪುಟದಿಂದ
ಮುಖ ಮುಚ್ಚಿಕೊಂಡು ಅಳಲೆಳಸಿದೆನು. ಆಗಲಿಲ್ಲ.

ಮದನ

ಹಾ ಮಾನವ ನಂದಿನಿ, ಸ್ವರ್ಗದ ಸುಖದ ದಿನವನ್ನು
ನನ್ನ ಕೈಯಿಂದಲೇ ಮುರಿದು ತಂದು
ಧರಣಿಯ ಏಕರಾತ್ರಿಯನ್ನು ಅದರಿಂದ ತುಂಬಿ
ಎಚ್ಚರಿಕೆಯಿಂದ ನಿನ್ನ ತುಟಿಯೆಡೆ ಹಿಡಿದೆನು.
ಶಚಿಯ ಪ್ರಸಾದ ಸುಧೆಯನ್ನು, ರತಿ ಚುಂಬಿತ
ನಂದನವನ ಗಂಧಮೋದಿತ ಮಾಧುರ್ಯವನ್ನು
ಕುಡಿಸಿದೆನು ನಿನಗೆ. ಆದರೂ ಈ ಅಳುವೇ!

ಚಿತ್ರಾಂಗದಾ

ದೇವ,
ಯಾರಿಗೆ ಕುಡಿಸಿದೆ? ಯಾರ ದಾಹ ಅಡಗಿಸಿದೆ?
ಆ ಚುಂಬನ, ಆ ಪ್ರೇಮಸಂಗಮ, ವೀಣೆಯ ಝಂಕಾರದಂತೆ
ಈಗಲೂ ಎದ್ದು ಈ ಅದುರುವ ಒಡಲನ್ನು
ವ್ಯಾಪಿಸುತ್ತಿವೆ. ಆದರೆ ಅವು ನನ್ನವಾಗಲಿಲ್ಲ.
ಬಹುಕಾಲ ಸಾಧಿಸಿ ಬರಿ ಒಂದು ಕ್ಷಣ ಮಾತ್ರ
ಪ್ರಥಮ ಮಿಲನ ಪಡೆಯಬಹುದು. ಆ ಮಿಲನವನ್ನು
ನನಗೆ ವಂಚನೆಮಾಡಿ ಯಾವುದು ಅನುಭವಿಸಿತು?
ಚಿರ ದುರ್ಲಭವಾದ ಆ ಮಿಲನದ ಸುಖಸ್ಮೃತಿಯನ್ನು
ತನ್ನ ಜೊತೆಗೆ ಒಯ್ದು ಈ ನನ್ನ ಮಾಯಾಲಾವಣ್ಯ
ಅತಿ ಅರಳಿದ ಪುಷ್ಪದಂತೆ ಉದುರಿ ನಾಶವಾಗುವುದು.
ನಿಜಳಾದ ದರಿದ್ರರಮಣಿ ರಿಕ್ತದೇಹದಿಂದ
ಅನೇಕ ಹಗಲು ಇರುಳು ಸ್ಥಿರವಾಗಿ ನಿಲ್ಲುವಳು.
ಮೀನಕೇತು, ಯಾವ ಮಹಾರಾಕ್ಷಸಿಯನ್ನು
ನೀನು ನನಗೆ ನೆರಳಿನಂತೆ ಜೊತೆಕಟ್ಟಿ ನಿಲ್ಲಿಸಿದೀಯೆ?
ಏನು ಅಭಿಸಂಪಾತ? ಚಿರಂತನ ತೃಷ್ಣೆಯಿಂದ
ನೊಂದು ಆಶಿಸಿದ ತುಟಿಯ ಬಳಿ ಬಂದಿತು ಚುಂಬನ;
ಅದನ್ನು ಇದು ಪಾನಮಾಡಿತು. ಆ ಪ್ರೇಮ ದೃಷ್ಟಿಪಾತ,
ಅಷ್ಟು ಆಗ್ರಹ ಪೂರ್ಣವಾದದ್ದು, ತಗುಲಿದ ಅಂಗದಲ್ಲಿ
ಆಸೆಯ ಕೆಂಪು ಗೆರೆಯಂತೆ ಗುರುತು ಮಾಡಿ ನಡೆಯುತಿತ್ತು,
ರವಿರಶ್ಮಿಯಂಥ ಆ ದೃಷ್ಟಿ ಚಿರರಾತ್ರಿ ತಾಪಸಿನಿಯಾದ
ಕುಮಾರೀ ಹೃದಯ ಪದ್ಮದ ಮುಂದೆ ಓಡಿ ಬಂದಿತು;
ಅದನ್ನು ಏಮಾರಿಸಿ ಇದು ಕರೆದೊಯ್ದಿತು.

ಮದನ

ನಿನ್ನೆ ರಾತ್ರಿ
ಹಾಗಾದರೆ ವ್ಯರ್ಥವಾಯಿತು? ಆಶೆಯ ದೋಣಿ ತೀರ

ದಂಡೆಗೆ ಬಂದು ತರಂಗಾಘಾತದಲ್ಲಿ ಹಿಂದೆ ಸರಿಯಿತು ?

ಚಿತ್ರಾಂಗದಾ

ನಿನ್ನೆ ರಾತ್ರಿ ಯಾವುದೂ ತೋರಲಿಲ್ಲ, ದೇವ.
ಸುಖ ಸ್ವರ್ಗ ಇಷ್ಟು ಹತ್ತಿರವಾಗಿ ಸಿಕ್ಕಿಬಿಟ್ಟಿತ್ತು ;
ದೊರಕಿತೋ ಇಲ್ಲವೋ ಆತ್ಮವಿಸ್ಮರಣ ಸುಖದಲ್ಲಿ
ನಾನು ಗಣಿಸಲಿಲ್ಲ. ಈ ಉದಯದಲ್ಲಿ ಎದ್ದ ನನಗೆ
ನೈರಾಶ್ಯ ಧಿಕ್ಕಾರಗಳ ವೇಗದಲ್ಲಿ ಒಳಒಳಗೆ ಎದೆ ಬಿರಿಯುತ್ತಿದೆ.
ರಾತ್ರಿಯ ಸಂಗತಿ ಒಂದೊಂದೂ ವಿವರವಾಗಿ ನೆನಪಾಗುತ್ತಿದೆ.
ಜೀವ ವಿದ್ಯುದ್‌ವೇದನೆಯನ್ನು ಅನುಭವಿಸುತ್ತಿದೆ.
ನನ್ನ ಅಂತರ್ಯ ನನ್ನ ಬಾಹ್ಯ ಸವತಿಯಾಗಿವೆ :
ಇನ್ನು ಇದನ್ನು ಮರೆಯುವಂತಿಲ್ಲ. ಸಪತ್ನಿಯನ್ನು
ಸ್ವಹಸ್ತದಿಂದ ಯತ್ನಪೂರ್ವಕವಾಗಿ ಸಜ್ಜುಮಾಡಿ
ನನ್ನ ಬಯಕೆಯ ಕ್ಷೇತ್ರವಾದ ವಾಸರಶಯ್ಯೆಗೆ
ಕಳುಹಿಸಬೇಕಾಗಿದೆ. ಎಡೆಬಿಡದೆ ಜೊತೆಗೆ ಇದ್ದು
ಅದಕ್ಕೆ ದೊರೆಯುವ ಆದರವನ್ನು ಪ್ರತಿಕ್ಷಣವೂ ಕಣ್ಣಿಟ್ಟು
ನೋಡಬೇಕಾಗಿದೆ. ದೇಹದ ಮುದ್ದಾಟವನ್ನು ನೋಡಿ
ಅಂತರ್ಯ ಹಿಂಸಾನಲದಲ್ಲಿ ಉರಿಯುತ್ತಿದೆ. ಇಂಥ ಶಾಪವನ್ನು
ನರಲೋಕದಲ್ಲಿ ಮತ್ತಾರು ಪಡೆದರು ? ಹೇ ಅತನು,
ನಿನ್ನ ವರವನ್ನು ಹಿಂದಕ್ಕೆ ತೆಗೆದುಕೋ.

ಮದನ

ತೆಗೆದುಕೊಂಡೆನೆನ್ನು ;
ಮಾಯೆಯ ಈ ಹೊದಿಕೆಯನ್ನು ಕಳಚಿ ಎಸೆದುಬಿಟ್ಟು
ನಾಳೆ ಉದಯ ಪಾರ್ಥನ ಎದುರಲ್ಲಿ ಯಾವ ಮುಖದಿಂದ
ಹೋಗಿ ನಿಲ್ಲುವೆ ? ಕುಸುಮ ಪಲ್ಲವಗಳಿಲ್ಲದ
ಹೇಮಂತದ ಹಿಮಶೀರ್ಣಲತೆ ? ಪ್ರಮೋದದ
ಮೊದಲ ಆಸ್ವಾದವನ್ನು ಕುಡಿಯಕೊಟ್ಟು
ಬಾಯಬಳಿಯಿಂದ ಸುಧಾಪಾತ್ರೆಯನ್ನು ಕಿತ್ತುಕೊಂಡು

ಭೂಮಿತಲದಲ್ಲಿ ಚೂರ್ಣಮಾಡಿದೆಯಾದರೆ,
ಆ ಅಕಸ್ಮಾತ್ ಆಘಾತದ ಭರದಲ್ಲಿ ಬೆಚ್ಚಿ ಅವನು
ನಿನ್ನನ್ನು ಎಷ್ಟು ಕೋಪದಿಂದ ನೋಡುವನು!

ಚಿತ್ರಾಂಗದಾ

ಅದೂ ಒಳಿತೆ. ಈ ಛದ್ಮರೂಪಿಣಿಗಿಂತ
ನಾನು ನೂರು ಮಡಿ ಶ್ರೇಷ್ಠ; ನನ್ನನ್ನೇ ತೋರುವೆನು.
ಅದು ಚೆನ್ನವಾಗದೆ ಹೋದರೆ, ಅವನು ಬೇಸರದ ಭರದಲ್ಲಿ
ತೊರೆದೇ ನಡೆದರೆ, ನಾನು ಎದೆ ಬಿರಿದು ಮಡಿಯುವೆನು;
ನಾನೇ ಆಗಿರುವೆನು. ಅದೂ ಚೆನ್ನ, ಇಂದ್ರಸಖ.

ವಸಂತ

ನನ್ನ ಮಾತನ್ನು ಕೇಳು, ಹೂವಿನ ಕೆಲಸದಲ್ಲಿ
ಅರುಳುವುದೆನ್ನುವುದು ಮುಗಿದ ಮೇಲೆ ಫಲ
ತಾನೇ ಕಾಣುವುದು. ಯಥಾ ಕಾಲದಲ್ಲಿ
ತಾಪಕ್ಲಿಷ್ಟ ಲಘು ಲಾವಣ್ಯದ ದಲ
ತಾನಾಗಿ ಉದುರಿ ಬೀಳುವುದು. ಆಗ ನೀನು
ನಿನ್ನ ನಿಜಗೌರವದೊಡನೆ ಹೊರಗೆ ಕಾಣುವೆ.
ಆಗಣ ಆ ನಿನ್ನನ್ನು ಕಂಡು ಅರ್ಜುನನು
ನೂತನ ಸೌಭಾಗ್ಯವೆಂದು ಸ್ವೀಕರಿಸುವನು. ಹೋಗು,
ಹೋಗು, ವತ್ಸೆ, ಯೌವನ ಉತ್ಸವಕ್ಕೆ ಹಿಂದಿರುಗು.

೪

ಅರ್ಜುನ, ಚಿತ್ರಾಂಗದಾ

ಚಿತ್ರಾಂಗದಾ

ಏನು ನೋಡುತ್ತಿರುವೆ, ವೀರ, ಹಾಗೆ?

ಅರ್ಜುನ

ನಿನ್ನ ಕೋಮಲಾಂಗುಲಿ ಪುಷ್ಪವೃಂತವನ್ನು ಹಿಡಿದು
ಮಾಲೆಮಾಡುವುದನ್ನು ನೋಡುತ್ತಿದ್ದೇನೆ.

ಚಳಕ ಬೆಡಗು ಎಂಬ ಒಡಹುಟ್ಟು ಎರಡು
ಚಂಚಲ ಉಲ್ಲಾಸದಿಂದ ಬೆರಳಿನ ಮುಂದೆ ಮುಂದೆ
ಜೊತೆಗೂಡಿ ಆಡುತ್ತಿರುವಂತೆ ಕಾಣುತ್ತದೆ.
ನೋಡುತ್ತ ಹಾಗೆಯೇ ಯೋಚಿಸುತ್ತಿದೇನೆ.

ಚಿತ್ರಾಂಗದಾ

ಏನೆಂದು ?

ಅರ್ಜುನ

ಹೀಗೆಯೇ ಸುಂದರ ಕರದಲ್ಲಿ ಹಿಡಿದು
ಸರಸವಾಗಿ ಅದೇ ವರ್ಣದ ಸ್ಪರ್ಶರಸದಿಂದ
ಪ್ರವಾಸದ ದಿನಗಳನ್ನು ಕಟ್ಟಿ ಕಟ್ಟಿ ಪ್ರಿಯೆ
ಮಾಲೆಯನ್ನು ಮಾಡುತ್ತಿದಾಳೆಂದು ಯೋಚಿಸಿದೆನು.
ಆ ಅಕ್ಷಯ ಆನಂದಹಾರವನ್ನು ತಲೆಯಲ್ಲಿ ಧರಿಸಿ
ಮನೆಗೆ ಹೋಗುವುದು.

ಚಿತ್ರಾಂಗದಾ

ಈ ಪ್ರೇಮಕ್ಕೆ ಮನೆ ಉಂಟೊ ?

ಅರ್ಜುನ

ಇಲ್ಲದೆ ಉಂಟೆ ?

ಚಿತ್ರಾಂಗದಾ

ಇಲ್ಲ. ಮನೆಗೆ ಕೊಂಡೊಯ್ಯುವೆಯಾ !
ಮನೆಯ ಮಾತೆತ್ತಬೇಡ. ಮನೆ ಬಹುಕಾಲದ್ದು ;
ನಿತ್ಯವಾದದ್ದನ್ನು ಮನೆಗೆ ತೆಗೆದುಕೊಂಡು ಹೋಗು.
ಅರಣ್ಯದ ಹೂ ಬಾಡುತ್ತದೆ. ಆಗ ಅದನ್ನು
ಎಸೆಯಲು ಮನೆಯಲ್ಲಿ ಸ್ಥಳ? ಅನಾದರದಿಂದ
ಕಲ್ಲ ಮಧ್ಯೆ ಎಸೆಯುವೆಯ ? ಅದಕ್ಕಿಂತಲೂ ನಾನು
ಅರಣ್ಯಾಂತಃಪುರದಲ್ಲಿದ್ದು ನನ್ನ ಆಟ ಮುಗಿದಾಗ,
ನಿತ್ಯನಿತ್ಯ ಎಲ್ಲಿ ಮೊಳಕೆಗಳು ಸಾಯುತ್ತವೆ,

ಪಲ್ಲವರಾಶಿ ಬೀಳುತ್ತದೆ, ಕೇಸರ ಉದುರುತ್ತದೆ,
ಕುಸುಮದಳ ಜಾರುತ್ತದೆ, ಪ್ರತಿ ಕ್ಷಣಕ್ಷಣವೂ
ನಶ್ವರ ಜೀವನಗಳು ಅರಳುತ್ತಿವೆ ಬೀಳುತ್ತಿವೆ,
ಅಲ್ಲಿ, ದಿನಾಂತದಲ್ಲಿ, ಕಾನನಪ್ರದೇಶದ
ಶತಶತ ಸಮಾಪ್ತ ಸುಖದ ಜೊತೆಯಲ್ಲಿ,
ಉದುರಿ ಹೋಗುತ್ತೇನೆ. ಯಾರ ಮನದಲ್ಲಿಯೂ
ಯಾವ ನೋವೂ ಇರದು.

ಅರ್ಜುನ

ಇಷ್ಟೇ ಸರಿಯೆ?

ಚಿತ್ರಾಂಗದಾ

ಇಷ್ಟೇ ಸರಿ. ವೀರ, ಇದಕ್ಕೆ ದುಃಖಿಸುವೆಯ?
ವಿರಾಮದ ದಿನದಲ್ಲಿ ಚೆನ್ನವೆಂದು ತೋರಿದ್ದನ್ನು
ವಿರಾಮದ ದಿನದೊಡನೆ ಮುಗಿಸಿ ಎಸೆದು ಬಿಡು.
ಸುಖವನ್ನು ಆದರ ಕಾಲಕ್ಕಿಂತ ಒಂದು ಕ್ಷಣ ಹೆಚ್ಚಾಗಿ
ಕಟ್ಟಿ ನಿಲ್ಲಿಸಿದರೆ, ಅದು ದುಃಖವಾಗುತ್ತದೆ.
ಏನಿದೆ ಅದನ್ನು ತೆಗೆದುಕೊ; ಎಷ್ಟು ಹೊತ್ತಿದೆ
ಅಷ್ಟು ಹೊತ್ತು ಇರಿಸಿಕೊ. ಆಸೆಯ ಉದಯದಲ್ಲಿ
ಎಷ್ಟು ಆಶಿಸಿದೆಯೋ, ತೃಪ್ತಿಯ ಸಂಜೆಯಲ್ಲಿ
ಅದಕ್ಕೆ ಹೆಚ್ಚಿನದನ್ನು ಆಶಿಸಬೇಡ.

ಹೊತ್ತು ಮುಳುಗಿತು,

ಈ ಮಾಲೆಯನ್ನು ಧರಿಸು. ದಣಿದ ನನ್ನ ಮೈಯನ್ನು
ನಿನ್ನ ಬಾಹುಗಳ ಮೇಲೆ ಎಳೆದುಕೋ ವೀರ.
ಅಧರದ ಸುಖ ಸಮ್ಮಿಲನದಿಂದ ಸಂಧಿಯಾಗಲಿ.
ಮಿಥ್ಯಾ ಅಸಂತೋಷ ಶಾಂತ ಆಗಲಿ.
ಬಾ, ಬಾಹು ಬಂಧದಲ್ಲಿ ಒಬ್ಬರನ್ನೊಬ್ಬರು
ಪ್ರಣಯದ ಸುಧಾಮಯ ಚಿರಪರಾಜಯದಲ್ಲಿ
ಬಂದಿ ಮಾಡೋಣ.

ಅರ್ಜುನ

ಅಕೊ ಕೇಳು ಪ್ರಿಯತಮೆ
ವನಾಂತದ ದೂರದ ಜನದ ಮನೆಗಳಲ್ಲಿ
ಆರತಿಯ ಶಾಂತಿಯ ಶಂಖ ಎದ್ದು ಮೊಳಗಿದೆ.

೫

ಮದನ, ವಸಂತ

ಮದನ

ನಾನು ಪಂಚಶರ, ಸಖ; ಒಂದು ಬಾಣದಿಂದ ನಗು,
ಒಂದರಿಂದ ಅಳು; ಒಂದು ಶರದಿಂದ ಆಸೆ,
ಒಂದರಿಂದ ಭಯ; ಒಂದರಲ್ಲಿ, ಒಂದೇ ಕ್ಷಣದಲ್ಲಿ,
ವಿರಹಮಿಲನ, ಆಶಾಭಯ, ದುಃಖಸುಖ, ಎಲ್ಲ ಒಂದಿಗೆ.

ವಸಂತ

ನಾನು ಸೋತೆ, ಇನ್ನು ನಿಲ್ಲಿಸು ಸಖ.
ಓ ಅನಂಗ, ನಿನ್ನ ರಣರಂಗವನ್ನು ಮುಗಿಸು ;
ಹಗಲಿರುಳು ಎಚ್ಚರವಿದ್ದು ನಿನ್ನ ಹುತಾಶನವನ್ನು
ಇನ್ನೆಷ್ಟು ಕಾಲ ಬೀಸುತ್ತಿರಲಿ ? ನಡುನಡುವೆ ಕಣ್ಣಿಗೆ
ನಿದ್ರೆ ಕವಿಯುತ್ತಿದೆ. ಬೀಸಣಿಗೆ ಬಾಗಿ ಬೀಳುತ್ತಿದೆ.
ತಪ್ತದೀಪ್ತಿ ರಾಶಿ ಬೂದಿಯಿಂದ ಮ್ಲಾನವಾಗಿದೆ.
ಬೆಚ್ಚಿ ಎದ್ದು ಮತ್ತೆ ಹೊಸ ಉಸಿರಿನಿಂದ ಅದನ್ನು
ನೂತನ ಉಜ್ವಲತೆಯಿಂದ ಎಚ್ಚರಗೊಳಿಸಿದೇನೆ.
ಇನ್ನು ಬೀಳ್ಕೊಡು ಸಖ.

ಮದನ

ನಾನು ಬಲ್ಲೆ, ನೀನು
ಅನಂತ ಅಸ್ಥಿರನು, ಚಿರಶಿಶು. ಎಲ್ಲ ಕಾಲವೂ
ಬಂಧನವಿಲ್ಲದೆ ದೇವಲೋಕ ಭೂಲೋಕದಲ್ಲಿ
ಆಡುತ್ತಿರುವೆ. ಏಕಾಗ್ರವಾದ ಪ್ರಯತ್ನದಿಂದ ನಾನು

ಯಾವುದನ್ನು ಬಹುಕಾಲ ಹಿಡಿದು ಸುಂದರಪಡಿಸುವೆನೊ
ಅದನ್ನು ನೀನು ಕ್ಷಣದಲ್ಲಿ ಧೂಳಿಯಲ್ಲಿ ಎಸೆದು
ಹಿಂತಿರುಗಿ ನೋಡದೆ ಹೋಗುವೆ. ಇನ್ನು ಬಹುದಿನ ಇಲ್ಲ ;
ಆನಂದ ಚಂಚಲವಾದ ಅವು, ನಿನ್ನ ರೆಕ್ಕೆಯ ಗಾಳಿಯಿಂದ
ಚ್ಯುತಪಲ್ಲವಗಳಂತೆ ಲಘುವೇಗದಿಂದ,
ಹು ಹು ಎಂದು ಎಲ್ಲಿಯೋ ಹಾರುತ್ತವೆ ;
ಹರ್ಷದಿಂದ ನಿಶ್ಚೀತವಾದ ವರ್ಷ ಮುಗಿಯುತ್ತಿದೆ.

೬

ಅರಣ್ಯದಲ್ಲಿ ಅರ್ಜುನ

ಅರ್ಜುನ

ಪ್ರಭಾತದಲ್ಲಿ ನಿದ್ರೆಯಿಂದ ಎಚ್ಚತ್ತ ಹೊತ್ತು
ಸ್ವಪ್ನಲಬ್ಧ ಅಪೂರ್ವ ರತ್ನವನ್ನು ಪಡೆದಂತಿದೇನೆ.
ಅದನ್ನಿಡಲು ಈ ಭೂಮಿಯಲ್ಲಿ ಎಡೆಯಿಲ್ಲ ;
ಅದನ್ನು ಕೆತ್ತಬಹುದಾದಂಥ ಕಿರೀಟ ಎಲ್ಲಿಯೂ ಇಲ್ಲ;
ಪೋಣಿಸಲು ತಕ್ಕ ದಾರವಿಲ್ಲ; ಎಸೆದು ಹೋಗೋಣವೆ,
ನಾನು ಅಂಥ ನರಾಧಮನಲ್ಲ. ಈ ಕಾರಣದಿಂದ
ಅದನ್ನು ಎತ್ತಿಕೊಂಡು ಚಿರರಾತ್ರಿ ಚಿರದಿನ ಸೆರೆಯಾಗಿ
ಕ್ಷತ್ರಿಯನ ಬಾಹು ಕರ್ತವ್ಯಹೀನವಾಗಿ ಬಿದ್ದಿವೆ.

ಚಿತ್ರಾಂಗದೆಯ ಪ್ರವೇಶ

ಚಿತ್ರಾಂಗದಾ

ಏನು ಯೋಚಿಸುತ್ತಿದೀಯೆ ?

ಅರ್ಜುನ

ಬೇಟೆಯ ವಿಷಯ.

ಅಲ್ಲಿ ನೋಡು ಪರ್ವತದ ಮೇಲೆ ವೃಷ್ಟಿಧಾರೆ
ಇಳಿದು ಬಂದಿದೆ. ಅರಣ್ಯದಲ್ಲಿ ಘನಘೋರಚ್ಛಾಯೆ.
ನಿರ್ಝರಿಣಿ ದುರ್ದಾಂತವಾಗಿ ಉಕ್ಕಿ ಎದ್ದಿದೆ.

ಕಲಗರ್ವ–ಉಪಹಾಸದಿಂದ ತಡಿಯನ್ನು ಭಯಪಡಿಸಿ
ಅವಹೇಳಿಸುತ್ತಿದೆ. ನನಗೆ ನೆನಪಾಗುತ್ತಿದೆ:
ಇಂಥ ಮಳೆ ದಿನದಲ್ಲಿ ನಾವು ಐವರು ಸೋದರರು
ಜೊತೆಯಾಗಿ ಚಿತ್ರಕ ಅರಣ್ಯತಟದಲ್ಲಿ
ಬೇಟೆಗೆ ಹೋಗುತ್ತಿದ್ದೆವು. ದಿನವೆಲ್ಲ ಬಿಸಿಲಿಲ್ಲದ
ಸ್ನಿಗ್ಧ ಅಂಧಕಾರದಲ್ಲಿ ಉತ್ಸಾಹದಿಂದ ಕಳೆಯುತಿತ್ತು.
ಗುರುಗುರು ಮೇಘಮಂದ್ರದಲ್ಲಿ ಹೃದಯ ಕುಣಿದೇಳುತಿತ್ತು;
ಝುರಝುರ ವೃಷ್ಟಿಜಲದಲ್ಲಿ ಹೊಳೆಯ ವಾಚಾಳ ಕಲ್ಲೋಲ್ಲಾಸದಲ್ಲಿ
ಮೃಗಗಳು ನಮ್ಮ ಮೆಲ್ನಡೆಯ ಸಪ್ಪುಳನ್ನು ಕೇಳವು.
ಬಣ್ಣದ ಹುಲಿ ದಾರಿಯ ಬದಿಯ ಮೇಲೆ
ಐದುಗುರ ಗುರುತನ್ನು ಇಟ್ಟುಹೋಗಿ ತನ್ನ ಮನೆ
ಎಲ್ಲಿ ಎಂದು ತೋರಿಸುತ್ತಿತ್ತು. ಕೇಕಾರವದಿಂದ
ಅರಣ್ಯ ಧ್ವನಿಸುತ್ತಿತ್ತು. ಬೇಟೆ ಮುಗಿದ ಮೇಲೆ
ನಾವು ಐವರು ಸಂಗಾತಿಗಳು ಪಂಥ ಹೂಡಿ
ಮಳೆಯ ಸೌಭಾಗ್ಯದ ಹೆಮ್ಮೆಯಿಂದ ಉಕ್ಕಿದ ನದಿಯನ್ನು
ಈಸಿ ದಾಟುತ್ತಿದ್ದೆವು. ಹಾಗೆ ಮತ್ತೆ ಬೇಟೆಗೆ
ಹೋದೇನೇ ಎಂದು ಯೋಚನೆ ಮಾಡಿದೆನು.

ಚಿತ್ರಾಂಗದಾ

ಓ ಬೇಟೆಗಾರ, ಯಾವ ಬೇಟವನ್ನು
ಆರಂಭ ಮಾಡಿದೀಯೆ ಮೊದಲು ಅದನ್ನು ಮುಗಿಸು.
ನಿನ್ನನ್ನು ಹಿಡಿದಿಟ್ಟಿರುವ ಈ ಸ್ವರ್ಣಮಾಯಾಮೃಗ
ಎಂದೂ ಇರುವುದೆಂದು ತಿಳಿದೆಯೋ? ಹಾಗಿಲ್ಲ ಕಂಡೆಯ!
ಈ ವನ್ಯಹರಿಣಿ ತನ್ನನ್ನು ತಾನೇ ಇಟ್ಟುಕೊಳ್ಳಲಾರದು.
ಯಾವ ಕ್ಷಣದಲ್ಲಿ ಬೆಚ್ಚಿ ಕನಸಂತೆ ಓಡುವುದೋ
ಯಾರು ಬಲ್ಲರು? ಕ್ಷಣಿಕವಾದ ಆಟದಿಂದ
ಚಿರದಿನದ ಪಾಶವನ್ನು ಮಾಡುವುದು ಆಗದು.
ಅಕೋ ದೃಷ್ಟಿಸಿ ನೋಡು, ಗಾಳಿಗೆ ಮಳೆಗೆ

ಹೇಗೆ ಆಟ ನಡೆಯುತ್ತಿದೆ. ಗಾಳಿಯ ಬೆನ್ನ ಮೇಲೆ
ಶ್ಯಾಮವರ್ಷ ನಿಮಿಷಕ್ಕೆ ಸಹಸ್ರ ಶರವನ್ನು ಎಸೆಯುತ್ತಿದೆ.
ಆಗಲೂ ಆ ದುರ್ದಾಂತ ಮೃಗ ಅಕ್ಷತ ಅಜೇಯವಾಗಿ
ಸೋಲದೆ ತಿರುಗುತ್ತಿದೆ. ನಾಥ, ನನ್ನ ನಿನ್ನ
ಈ ಆಟ ಅಂಥದೇ. ಈ ಮಳೆಯ ದಿನದಲ್ಲಿ
ಸರ್ವಪ್ರಯತ್ನದಿಂದ ಚಂಚಲೆಯನ್ನು ಬೇಟೆಯಾಡು.
ಬತ್ತಳಿಕೆಯಲ್ಲಿ ಎಷ್ಟು ಶರ, ಎಷ್ಟು ಅಸ್ತ್ರ ಇವೆ
ಅವನ್ನೆಲ್ಲ ಏಕಾಗ್ರ ಆಗ್ರಹ ಭಾವದಿಂದ
ಸುರಿಸುವೆಯಂತೆ. ಒಮ್ಮೆ ಕತ್ತಲೆ, ಒಮ್ಮೆ ಚಕಿತ ದೀಪ್ತಿ,
ಬೆಚ್ಚಿ ನಗೆಯಲ್ಲಿ ಕಲೆಯಲಿ, ಒಮ್ಮೆ ಸ್ನಿಗ್ಧವಾದ
ವೃಷ್ಟಿ ವರ್ಷಣ, ಒಮ್ಮೆ ದೀಪ್ತ ವಜ್ರಜ್ವಾಲೆ.
ಮಧ್ಯೆ ಮೇಘ ಕವಿದ ಜಗದ ನಡುವೆ ಮಾಯಾಮೃಗಿ
ಬಾಧೆ ಇಲ್ಲದೆ ಚಿರಕಾಲ ಸುತ್ತಿ ಸುಳಿಯಲಿ.

೭

ಮದನ, ಚಿತ್ರಾಂಗದಾ

ಚಿತ್ರಾಂಗದಾ

ಹೇ ಮನ್ಮಥ, ನನ್ನ ದೇಹಾದ್ಯಂತ
ಏನನ್ನು ಲೇಪಿಸಿರುವೆಯೋ ನಾನರಿಯೆ.
ತೀವ್ರ ಮದಿರದಂತೆ ರಕ್ತದಲ್ಲಿ ಬೆರೆತು ಅದು
ನನ್ನ ಜೀವನವನ್ನು ಉನ್ಮಾದಗೊಳಿಸುತ್ತಿದೆ.
ನಡೆಯ ಹೆಮ್ಮೆಯಿಂದ ಮತ್ತಳಾದ ಹರಿಣಿ ನಾನು
ಕೆದರಿದ ಕೂದಲಿಂದ ಉಬ್ಬಸ ಪಡುತ್ತ
ಭೂಮಿಯನ್ನು ದಾಟಿ ಚಿಗಿದು ಓಡುತ್ತಿರುವೆನು.
ಧನುರ್ಧರ ಘನಶ್ಯಾಮರಾದ ನನ್ನ ವ್ಯಾಧರು,
ನಿರಾಶಳಾಗುವಂತೆ ನನ್ನನ್ನು ದಣಿಸಿರುವರು.
ಅವರು ದಾರಿದಾರಿಯಲ್ಲೂ ವನವನದಲ್ಲೂ

ನನ್ನನ್ನು ಅಲಸುತ್ತಿರುವರು. ನಿರ್ದಯರಾಗಿ
ವಿಜಯ ಸುಖದಲ್ಲಿ ಕೌತುಕದ ನಗೆಯನ್ನು
ನಗುತ್ತಿರುವರು. ಈ ಆಟವನ್ನು ನಿಲ್ಲಿಸಲು
ಭಯವಾಗುತ್ತಿದೆ; ಒಂದು ಕ್ಷಣ ಸುಮ್ಮನಾದೆನೋ
ಅಳುವಿಂದ ಎದೆ ತುಂಬಿ ಒಡೆದು ಹೋಗುವುದು.

ಮದನ

ಇರಲಿ, ನಿಲ್ಲಿಸಬೇಡ. ಈ ಆಟ ನನ್ನದು.
ನಡೆಯಲಿ; ಮುರಿಯಲಿ ಬಾಣ, ಹೃದಯ ಬಿರಿಯಲಿ;
ನನ್ನ ಬೇಟೆ ಇಂದು ಅರಣ್ಯದ ನಡುವೆ;
ನವೀನ ವರ್ಷಾಕಾಲದಲ್ಲಿ. ಅದನ್ನು ದಣಿಸಿಬಿಡು;
ಪದಾನತವಾಗಿ ಮಾಡು; ದೃಢಪಾಶದಲ್ಲಿ ಬಂಧಿಸು;
ಕನಿಕರ ತೋರಬೇಡ, ನಗುವಿಂದ ಜರ್ಜರಪಡಿಸು;
ಅಮೃತವಿಷದಿಂದ ಬಳಿದ ಕೂರಾದ ವಾಗ್ಬಾಣದಿಂದ
ಎದೆಯನ್ನು ನಾಟು. ಬೇಟೆಯಲ್ಲಿ ಕನಿಕರ ತರವಲ್ಲ.

೮

ಅರ್ಜುನ, ಚಿತ್ರಾಂಗದಾ

ಅರ್ಜುನ

ಒಡತಿ ಇಲ್ಲವೆಂದು ಪ್ರಿಯ ಪರಿಜನ ಅಳುವಂಥ
ಮನೆ ಒಂದು ಯಾವುದೂ ನಿನಗೆ ಇಲ್ಲವೆ ಪ್ರಿಯೆ?
ದಿನವೂ ಸ್ನೇಹ ಸೇವೆಮಾಡಿ ಯಾವ ಆನಂದ ಪುರಿಯನ್ನು
ಸುಧಾಮಗ್ನ ಮಾಡಿದ್ದೆಯೋ, ಯಾವ ಒಂದು ಎಡೆಯ
ದೀಪವನ್ನಾರಿಸಿ ಅರಣ್ಯದ ಮಧ್ಯೆ ತಿರುಗುತ್ತಿದೀಯೊ,
ನಿನ್ನಎಳವೆಯ ನೆನಪು ಎಲ್ಲಿಗೆ ಅಳುತ್ತ ಹೋಗುವುದೋ,
ಅಂಥ ಸ್ಥಾನ ಇಲ್ಲವೆ?

ಚಿತ್ರಾಂಗದಾ

ಏಕೆ ಕೇಳುವೆ? ನಿನಗೆ
ಈ ಸುಖ ಸಾಕಾಯಿತೊ? ನಿನಗೆ ಏನು ಕಾಣುತ್ತದೆ

ಅದೇ ನಾನು. ಮತ್ತೆ ಬೇರೆ ಪರಿಚಯ ಇಲ್ಲ.
ಪ್ರಭಾತದಲ್ಲಿ ಇಕೋ ಅಲುಗುತ್ತಿರುವುದಲ್ಲ,
ಕಿಂಶುಕದ ಒಂದು ಪಲ್ಲವದ ಕೊನೆಯಲ್ಲಿ
ಒಂದು ಹನಿ ಮಂಜು, ಅದಕ್ಕೆ ನಾಮ ಧಾಮ ಉಂಟೆ?
ಯಾರೇ ಆಗಲಿ ಅದರ ಪರಿಚಯ ಕೇಳುವರೆ?
ನೀನು ಯಾರನ್ನು ಪ್ರೀತಿಸುತ್ತಿರುವೆಯೊ ಅವಳು
ನಾಮ ಧಾಮ ಇಲ್ಲದ ಇಂಥದೆ ಮಂಜಿನ ಹನಿ.

ಅರ್ಜುನ

ಅವಳಿಗೆ ಪೃಥ್ವಿಯಲ್ಲಿ ಬಂಧನವೇ ಇಲ್ಲವೇ?
ಬರಿಯ ಒಂದೇ ಒಂದು ಬಿಂದು ಸ್ವರ್ಗ
ಮರವಿನಿಂದ ಭೂಮಿಗೆ ಬಿದ್ದಿತೇ?

ಚಿತ್ರಾಂಗದಾ

ಬಿದ್ದಿರುವುದು ಸಾಧ್ಯ.
ಅರಣ್ಯದ ಕುಸುಮಗಳು ಬರಿಯ ಒಂದು ಕ್ಷಣಕಾಲ
ತಮ್ಮ ಉಜ್ವಲತೆಯನ್ನು ಕೊಟ್ಟಿವೆ.

ಅರ್ಜುನ

ಅದರಿಂದಲೇ ಪ್ರಾಣ
ಸದಾ, ಹೋಯಿತೇ, ಹೋಯಿತೇ, ಎನ್ನುತ್ತಿದೆ.
ತೃಪ್ತಿಯಾಗದು; ಶಾಂತಿ ಬಾರದು; ಓ ಸುದುರ್ಲಭೆ,
ಇನ್ನೂ ಹತ್ತಿರ ಬಾ. ನಾಮ ಧಾಮದಲ್ಲಿ
ಗೋತ್ರ ಗೃಹ ವಾಕ್ಯ ದೇಹ ಮನಗಳಲ್ಲಿ
ಸಾವಿರ ಬಂಧನದಲ್ಲಿ ನನ್ನನ್ನು ಹಿಡಿ, ಪ್ರಿಯೆ.
ನಾಲ್ಕು ಕಡೆಯಿಂದ ಮುತ್ತಿ ನಿನ್ನನ್ನು ಸೋಕಿ,
ಈ ಭಯವುಳಿದು ನಾನು ಧೈರ್ಯದಿಂದ ಬಾಳುವೆನು.
ಹೆಸರಿಲ್ಲವೆಂಬೆಯು? ಹಾಗಾದರೆ ನಿನ್ನನ್ನು
ಯಾವ ಪ್ರೇಮಮಂತ್ರದಿಂದ ಹೃದಯದಲ್ಲಿ ಜಪಿಸಲಿ?

ಗೋತ್ರವಿಲ್ಲ? ಹಾಗಾದರೆ ಈ ಕಮಲವನ್ನು
ಯಾವ ಮೃಣಾಲದಲ್ಲಿ ಸೆಕ್ಕಿ ನಿಲ್ಲಿಸಲಿ?

ಚಿತ್ರಾಂಗದಾ

ಇಲ್ಲ, ಇಲ್ಲ.
ನೀನು ಯಾರನ್ನು ಕಟ್ಟಿಡಲು ಬಯಸುವೆ ಅವಳು
ಎಂದೂ ಬಂಧನವನ್ನರಿತವಳಲ್ಲ. ಆ ವಸ್ತು
ಕೇವಲ ಮೇಘದ ಮೇಲಣ ಸುವರ್ಣ ದೀಪ್ತಿ,
ಕುಸುಮಗಳ ಸುಗಂಧ, ತರಂಗಗಳ ಗಮನ.

ಅರ್ಜುನ

ಹಾಗಾದರೆ ಅವಳನ್ನು ಪ್ರೀತಿಸುವ ನಾನು ನಿರ್ಭಾಗ್ಯನು.
ಪ್ರಿಯೇ, ಪ್ರೇಮದ ಕೈಯಿಂದ ಆಕಾಶಕುಸುಮವನ್ನು ಕೊಡದಿರು.
ಸುಖದಲ್ಲಿ ದುಃಖದಲ್ಲಿ ಸುದಿನ ದುರ್ದಿನದಲ್ಲಿ
ಎದೆಯಲ್ಲಿಡಲು ಇವನಿಗೆ ಧನವನ್ನು ಕೊಡು.

ಚಿತ್ರಾಂಗದಾ

ವರ್ಷ ಮುಗಿಯಲಿಲ್ಲ, ಈ ಮಧ್ಯೆ ದಣಿವೇ?
ಹಾ, ಈಗ ಅರಿತೆನು, ಪುಷ್ಪದ ಆಯುಸ್ಸು ಅಲ್ಪವಾಗಿರುವುದು
ದೇವರ ಅನುಗ್ರಹ. ಅಳಿದ ವಸಂತಗಳ
ಎಷ್ಟೋ ಮೃತ ಪುಷ್ಪಗಳೊಡನೆ ಈ ಮೋಹಕ ತನು
ಉದುರಿ ಬಿದ್ದಿದ್ದರೆ ಒಳಿತೇ ಆಗುತ್ತಿತ್ತು.
ಹೆಚ್ಚು ದಿನ ಇಲ್ಲ ಪಾರ್ಥ, ಇರುವಷ್ಟು ದಿನದಲ್ಲಿ
ಆಶೆಯನ್ನು ಪೂರ್ತಿಗೊಳಿಸುವ ಕುತೂಹಲದಿಂದ,
ಅವುಗಳ ಆನಂದ ಮಧುವನ್ನು ನಿಶ್ಶೇಷವಾಗಿ ಪಾನಮಾಡು.
ಆಮೇಲೆ ಬಾರಿಬಾರಿಗೆ ಸ್ಮೃತಿಯ ಕುಹಕದಲ್ಲಿ ಸಿಕ್ಕಿ
ಗತ ಸಂಧ್ಯಾಕಾಲದ ಚೂತವೃಂತ ಮಾಧವಿಯ ಬಳಿಗೆ
ತೃಷಿತ ಭೃಂಗ ಬರುವಂತೆ ಮರಮರಳಿ ಬರುವುದು ಬೇಡ.

೯

ವನಚರಗಣ, ಅರ್ಜುನ

ವನಚರ

ಹಾ, ಹಾ, ಯಾರು ರಕ್ಷಿಸುವವರು?

ಅರ್ಜುನ

ಏನಾಗಿದೆ?

ವನಚರ

ಉತ್ತರ ಪರ್ವತದಿಂದ ಹೊರಟು ದಸ್ಯುದಲ,
ಮಳೆಗಾಲದ ಪರ್ವತ ಪ್ರವಾಹದ ವೇಗದಿಂದ
ಹಾಯ್ದು ಬಂದು ಹಾಡಿಗಳನ್ನು ನಾಶಮಾಡುತ್ತಿದೆ.

ಅರ್ಜುನ

ಈ ರಾಜ್ಯದ ರಕ್ಷಕರು ಯಾರೂ ಇಲ್ಲವೆ?

ವನಚರ

ದುಷ್ಟರನ್ನು ದಮನಮಾಡಲು ನಮ್ಮ ರಾಜಕುಮಾರಿ
ಚಿತ್ರಾಂಗದಾ ಇದ್ದಳು. ಅವಳ ಭಯದಿಂದ
ರಾಜ್ಯದಲ್ಲಿ ಯಮನ ಭಯ ಒಂದು ಹೊರತಾಗಿ
ಬೇರೆ ಭಯ ಇರಲಿಲ್ಲ. ಅಜ್ಞಾತ ಭ್ರಮಣ ವ್ರತದಲ್ಲಿ
ಅವಳು ತೀರ್ಥಯಾತ್ರೆಗಾಗಿ ಹೋಗಿದಾಳಂತೆ.

ಅರ್ಜುನ

ಏನು? ಈ ರಾಜ್ಯದ ರಕ್ಷಕಿ ಸ್ತ್ರೀಯೆ?

ವನಚರ

ಆ ದೇವಿ ತನ್ನ ಅನುರಕ್ತ ಪ್ರಜೆಗಳಿಗೆ
ಒಂದು ದೇಹದಲ್ಲಿ ಬೆರೆತ ತಾಯಿ ತಂದೆ.
ಸ್ನೇಹದಿಂದ ರಾಜಮಾತೆ; ವೀರ್ಯದಲ್ಲಿ ಯುವರಾಜ.

ವನಚರರು ಹೋಗುತ್ತಾರೆ

ಚಿತ್ರಾಂಗದಾ ಬರುತ್ತಾಳೆ

ಚಿತ್ರಾಂಗದಾ

ಏನು ಯೋಚಿಸುವೆ ನಾಥ?

ಅರ್ಜುನ

ಏಕೋ ಕಾಣೆ,
ಚಿತ್ರಾಂಗದಾ ಎನ್ನುವರಲ್ಲ, ರಾಜಕುಮಾರಿ,
ಅವಳು ಎಂಥವಳಿರಬಹುದೆಂದು ಯೋಚಿಸುತ್ತಿದೇನೆ.
ಪ್ರತಿ ದಿನ ನೂರಾರು ಬಾಯಿಂದ ಅವಳ ವಿಷಯವಾಗಿ
ನವನವ ಅಪೂರ್ವ ಕಥೆಯನ್ನು ಕೇಳುತ್ತಿದೇನೆ.

ಚಿತ್ರಾಂಗದಾ

ಅವಳೊಬ್ಬ ಕುತ್ಸಿತಳು. ಕುರೂಪಿ. ಅವಳಿಗೆ ಇಂಥ
ಬಾಗಿದ ಹುಬ್ಬಿಲ್ಲ; ಇಂಥ ಕರಿಗಪ್ಪಾದ ಕಣ್ಣಿಲ್ಲ.
ಅವಳ ಕಠಿಣ ಶಕ್ತ ಬಾಹು ಲಕ್ಷ್ಯಭೇದವನ್ನು ಕಲಿತಿವೆ;
ಗಂಡಿನ ಮೈಯನ್ನು ಇಂಥ ಸುಕೋಮಲ ನಾಗಪಾಶದಿಂದ
ಕಟ್ಟುವುದನ್ನು ಅವಳು ಅರಿಯಳು.

ಅರ್ಜುನ

ಆದರೂ ಅವಳು
ಸ್ನೇಹದಲ್ಲಿ ನಾರಿ, ಶೌರ್ಯದಲ್ಲಿ ಪುರುಷಳೆಂದು ಕೇಳಿರುವೆನು.

ಚಿತ್ರಾಂಗದಾ

ಛಿ ಬಿಡು, ಹಾಗಿರುವುದೇ ಅವಳ ದೌರ್ಭಾಗ್ಯ.
ನಾರಿ ತೀರಾ ನಾರಿಯಾದರೆ, ಭೂಮಿಗೆ ಒಂದು ಭೂಷಣ,
ಒಂದು ಬೆಳಕು. ಕೇವಲ ಪ್ರೇಮದಿಂದ, ಮಧುರವಾದ ಹಟದಿಂದ,
ನೂರು ತರದ ಬೆಡಗಿನಿಂದ, ಕ್ಷಣಬಿಡದೆ ಸಂತತವಾಗಿ
ದಾಳಿ ಮಾಡಿ ಅಪ್ಪಿಕೊಂಡು, ವಕ್ರವಾಗಿ ಕಟ್ಟಿಕೊಂಡು,
ನಗುತ್ತ ಅಳುತ್ತ ಸೇವೆಯಿಂದ ಲಲ್ಲೆಯಿಂದ,
ಪತಿಯನ್ನು ಸದಾ ನೋಡಿಕೊಂಡಳೇ, ಅವಳ ಜನ್ಮ ಸಾರ್ಥಕ.

ಹೆಣ್ಣಾದವಳ ಕಾರ್ಯದಕ್ಷತೆ, ಕೀರ್ತಿ, ಶೌರ್ಯ, ಬಲ,
ಶಿಕ್ಷೆ, ದೀಕ್ಷೆ ಏಕೆ ಬರುತ್ತವೆ? ಪ್ರಿಯ, ನೀನು ನಾಳೆ
ಅವಳನ್ನು ಇಲ್ಲಿ ವನಪಥದ ಪಕ್ಕದಲ್ಲಿ,
ಈ ಪೂರ್ಣಾತೀರದಲ್ಲಿ, ಆ ದೇವಾಲಯದ ಒಳಗೆ,
ನೋಡಿದ್ದೇ ಆದರೆ ನಕ್ಕು ಹೊರಟು ಹೋಗುವೆ.
ಹಾ, ಹಾ, ಇಂದು ನಾರಿಯ ಸೌಂದರ್ಯದಲ್ಲಿ
ಇಷ್ಟು ಅರುಚಿಯೇ? ಹೆಣ್ಣಿನಲ್ಲಿ ಗಂಡಿನ ಗುಣವನ್ನು
ಹುಡುಕ ಹೊರಟಿರುವೆಯಲ್ಲ!

ಬಾ ನಾಥ,

ಅಕೋ ನೋಡು ಶೈಲ ಗುಹಾಮುಖದಲ್ಲಿ.
ಆ ಗಾಢಚ್ಛಾಯೆ, ಅಲ್ಲಿ ಎಳೆಯ ಪೀತ ಶ್ಯಾಮಲ
ಕಿಸಲಯವನ್ನು ಎತ್ತಿ ಝರಿಯ ತುಂತುರಿನಲ್ಲಿ ನೆನಸಿ
ನಮ್ಮ ಮಧ್ಯಾಹ್ನ ಶಯನವನ್ನು ಹಾಸಿ ಇದೇನೆ.
ಗಭೀರ ಪಲ್ಲವಚ್ಛಾಯೆಯಲ್ಲಿ ಕುಳಿತು,
ಕ್ಲಾಂತ ಕಂಠದಿಂದ ಮೊರೆಯುತ್ತ ಕಪೋತ
"ಕಾಲಹೋಯಿತು", "ಕಾಲಹೋಯಿತು" ಎನ್ನುತ್ತಿದೆ.
ನದಿ ನೆರಳಡಿಯಲ್ಲಿ ಕುಲು ಕುಲು ಶಬ್ದದಿಂದ
ಹರಿದು ಹೋಗುತ್ತಿದೆ. ಬಂಡೆಯ ಮೇಲೆ
ಪದರ ಪದರದಲ್ಲಿ ಸರಸ ಸುಸ್ನಿಗ್ಧವಾದ
ನೆನೆದ ಕರಿಯ ಪಾಚಿ ಕೋಮಲಾಧರದಿಂದ
ಕಣ್ಣನ್ನು ಮುದ್ದಿಸುತ್ತಿದೆ. ಆ ನಿರ್ಜನ ಆಶ್ರಮಕ್ಕೆ
ಹೋಗೋಣ ಬಾ ನಾಥ

ಅರ್ಜುನ

ಇಂದು ಬೇಡ ಪ್ರಿಯೆ.

ಚಿತ್ರಾಂಗದಾ

ಏಕೆ ನಾಥ?

ಅರ್ಜುನ

ಕೇಳಿದೆನು, ಜನರನ್ನು ಹಿಂಸಿಸಲು
ದಸ್ಯುದಳ ಬಂದಿದೆಯೆಂದು. ಭೀತ ಜನರನ್ನು
ರಕ್ಷಿಸಲೆಳಸುವೆನು.

ಚಿತ್ರಾಂಗದಾ

ಭಯವೇನೂ ಇಲ್ಲ ಪ್ರಭು.
ಅರಗುವರಿ ಚಿತ್ರಾಂಗದೆ ತೀರ್ಥಯಾತ್ರಾ ಕಾಲದಲ್ಲಿ
ದಿಕ್ಕು ದಿಕ್ಕಿಗೆ ಎಚ್ಚರಿಕೆಯ ಕಾವಲವರನ್ನು
ನಿಲ್ಲಿಸಿ ಹೋಗಿರುವಳು. ವಿಪತ್ತಿನ ಮಾರ್ಗ ಎಷ್ಟುಂಟು
ಅವನ್ನೆಲ್ಲ ಜಾಗರೂಕತೆಯಿಂದ ತಡೆದು ಹೋಗಿರುವಳು.

ಅರ್ಜುನ

ಆದರೂ ಅಪ್ಪಣೆ ಕೊಡು ಪ್ರಿಯೆ. ಸ್ವಲ್ಪ ಕಾಲ
ಕ್ಷತ್ರಿಯ ಕರ್ತವ್ಯವನ್ನು ಮಾಡಿ ಬರುವೆನು.
ನನ್ನ ಈ ಬಾಹುಗಳು ಬಹುದಿನದಿಂದ
ಆಲಸ್ಯದಲ್ಲಿದ್ದಿವೆ. ಓ ಸುಮಧ್ಯಮೆ
ಕೀರ್ತಿ ಕ್ಷೀಣವಾಗಿರುವ ಈ ಭುಜದ್ವಯುವನ್ನು
ಮತ್ತೊಮ್ಮೆ ನವೀನ ಗೌರವದಿಂದ ತುಂಬಿತರುವೆನು ;
ನಿನ್ನ ತಲೆಯು ಕೆಳಗೆ ಎಚ್ಚರಿಕೆಯಿಂದಿಡುವೆನು ;
ಆಗ ಅದು ನಿನಗೆ ತಕ್ಕ ದಿಂಬು ಆಗುವುದು.

ಚಿತ್ರಾಂಗದಾ

ನಾನು ಹೋಗಗೊಡದಿದ್ದರೆ, ಕಟ್ಟಿ ನಿಲ್ಲಿಸಿದರೆ
ಒದರಿಕೊಂಡು ಹೋಗುವೆಯ ? ಹಾಗಾದರೆ ಹೋಗು.
ಆದರೆ ಮರೆಯಬೇಡ. ಹರಿದ ಬಳ್ಳಿ ಮತ್ತೆ ಅಂಟಿಸಬರುವುದಿಲ್ಲ.
ತೃಪ್ತಿ ಆಗಿರುವುದಾದರೆ ಹೋಗು, ನಾನು ತಡೆಯುವುದಿಲ್ಲ.
ಆಗಿಲ್ಲವಾದರೆ ಇದು ನೆನವಿರಲಿ : ಚಂಚಲೆಯಾದ ಸುಖಲಕ್ಷ್ಮಿ
ಯಾರಿಗಾಗಿಯೂ ಕುಳಿತು ಕಾಯುವುದಿಲ್ಲ.

ಅವಳು ಯಾರಿಗೂ ಸೇವಾದಾಸಿಯಲ್ಲ.
ನರನಾರಿಯರು ಭಯದಿಂದ ಭಕ್ತಿಯಿಂದ
ಅವಳಿಗೆ ಸೇವೆ ಮಾಡಬೇಕು. ಹಗಲೂ ಇರುಳೂ
ಅವಳು ಪ್ರಸನ್ನಳಾಗಿರುವಷ್ಟು ಕಾಲವೂ
ಕಣ್ಣಲ್ಲಿ ಕಣ್ಣು ಇಟ್ಟುಕೊಂಡು ಇರಬೇಕು.
ಸುಖದ ಕಲಿಕೆಯನ್ನು ಇಟ್ಟುಕೆಲಸಕ್ಕೆ ಹೋಗುವವರು
ಕೆಲಸ ಮುಗಿದು ಸಂಜೆಯಲ್ಲಿ ಹಿಂದಿರುಗಿ ಬಂದಾಗ
ಮುಗುಳು ಆರಳಿ ದಳ ಉದುರಿ ಭೂಮಿಯಮೇಲೆ
ಬಿದ್ದಿರುವುದನ್ನು ನೋಡಿ ತಮ್ಮ ಎಲ್ಲ ಕೆಲಸವೂ
ವ್ಯರ್ಥವೆಂದು ಎಣಿಸುವರು. ಬಹುಕಾಲ
ಜೀವಂತ ಅತೃಪ್ತಿ ಅವರ ಜೀವನದ ಮಧ್ಯೆ
ಕ್ಷುಧಾತುರವಾಗಿ ನಿಲ್ಲುತ್ತದೆ. ಬಾ ನಾಥ ಕುಳಿತುಕೊ.
ಇಂದೇಕೆ ಇಷ್ಟು ಅನ್ಯ ಮನಸ್ಸು? ಯಾರ ನೆನಪೆಂದೆ?
ಚಿತ್ರಾಂಗದೆಯದೆ? ಇಂದೇನು ಅವಳದು ಇಷ್ಟು ಪುಣ್ಯ?

ಅರ್ಜುನ

ಆ ವೀರಾಂಗನೆ ಬೇರೆಯಾರ ಸಲುವಾಗಿ
ದುಷ್ಕರ ವ್ರತವನ್ನು ಹಿಡಿದಿರುವಳೋ ಎಂದು
ಯೋಚಿಸುತ್ತಿದೇನೆ. ಅವಳಿಗೇನು ಕಡಮೆಯೋ?

ಚಿತ್ರಾಂಗದಾ

ಅವಳಿಗೇನು ಕಡಮೆಯೆ? ಆ ನಿರ್ಭಾಗ್ಯಳಿಗೆ ಇದ್ದದ್ದೇನು?
ಅಭ್ರಭೇದಿಯಾದ ದುರ್ಗ ಸುದುರ್ಗಮವಾದ
ಅವಳ ಶೌರ್ಯ ಲಲಿತವಾದ ರಮಣೀ ಸೌಂದರ್ಯವನ್ನು
ನಾಲ್ಕು ದಿಕ್ಕಿನಲ್ಲೂ ತಡೆದು ಸೆರೆ ಮಾಡಿಟ್ಟಿತು.
ಹೆಣ್ಣಾದವಳು ಸಹಜವಾಗಿ ಅಂತಃಪುರವಾಸಿನಿ.
ತನ್ನಿಷ್ಟಕ್ಕೆ ತಾನು ಗೋಪ್ಯದಲ್ಲಿರುವಳು.
ಹೃದಯದ ಪ್ರತಿಬಿಂಬ ದೇಹದ ಶೋಭೆಯಲ್ಲಿ ಕಾಣಿಸದಿದ್ದರೆ

ಹೆಣ್ಣಾದವಳನ್ನು ನೋಡಬಯಸುವವರು ಯಾರು ?
ಅವಳಿಗೆ ಕಡಮೆಯೇನೆ? ಅರುಣ ಲಾವಣ್ಯಲೇಖೆ
ಎಂದಿಗೂ ಆರಿಹೋದ ಉಷೆಯಂತೆ ಹೆಣ್ಣಾದವಳು
ಶೌರ್ಯ ಶೈಲದ ಶಿಖರದ ಮೇಲೆ ತನ್ನ ನೂರು ಪದರದ
ತಿಮಿರದ ಅಡಿಯಲ್ಲಿ ನಿತ್ಯ ಏಕಾಕಿನಿಯಾಗಿ ಕುಳಿತರೆ
ಅವಳಿಗೇನು ಕಡಮೆಯೆ? ಬಿಡು ಅವಳ ಮಾತು.
ಅದು ಪುರುಷರ ಕಿವಿಗೆ ಇಂಪಾಗಿ ಕಾಣದು.

ಅರ್ಜುನ

ಇಲ್ಲ, ಹೇಳು; ನನ್ನ ಈ ಕೇಳಬೇಕೆಂಬಾಸೆ
ಬರುಬರುತ್ತ ಹೆಚ್ಚುತ್ತಿದೆ. ಹೃದಯ ಅಂತರಾಳದಲ್ಲಿ
ಅದನ್ನು ಅನುಭವಿಸುತ್ತಿದೆ. ಅರ್ಧ ರಾತ್ರಿಯಲ್ಲಿ ಯಾವುದೋ
ಅಪೂರ್ವಪ್ರದೇಶವನ್ನು ಹೊಕ್ಕ ದಾರಿಹೋಕನಂತಿದೇನೆ ನಾನು.
ನದಿ ಗಿರಿ ವನ ಭೂಮಿ ಸುಪ್ತಿನಿಮಗ್ನವಾಗಿರಲು
ಶುಭ್ರ ಸೌಧ ಕಿರೀಟನಿಯಾದ ಉದಾರ ನಗರಿ
ಅವನಿಗೆ ನೆರಳಂತೆ ಅರ್ಧ ಸ್ಫುಟವಾಗಿ ಕಾಣುತ್ತದೆ.
ಸಾಗರ ಗರ್ಜನೆ ಕೇಳುತ್ತದೆ. ಪ್ರಭಾತ ಪ್ರಕಾಶದಲ್ಲಿ
ನಾಲ್ಕು ದಿಕ್ಕೂ ವಿಚಿತ್ರ ವಿಸ್ಮಯದಲ್ಲಿ ಅರಳುತ್ತದೆ.
ಆ ವೇಳೆಯನ್ನು ಉತ್ಸುಕ ಹೃದಯದಿಂದ ಕುತೂಹಲನಾಗಿ
ಅವನು ಎದುರು ನೋಡುತ್ತಾನೆ. ಹೇಳು ಹೇಳು,
ಅವಳ ಮಾತನ್ನು ಕೇಳೋಣ.

ಚಿತ್ರಾಂಗದಾ

ಇನ್ನು ಕೇಳುವುದೇನಿದೆ ?

ಅರ್ಜುನ

ಊಹಿಸಿ ನೋಡಬಲ್ಲೆನು. ತನ್ನ ಎಡಗೈಯಲ್ಲಿ
ಕುದುರೆಯ ಕಡಿವಾಣ ಹಿಡಿದು, ಬಲಗೈಯಲ್ಲಿ
ಧನುಸ್ಸು ಶರವನ್ನು ಸುಲಭವಾಗಿ ಎತ್ತಿ

ಹೃಷ್ಟನಗರದ ವಿಜಯಲಕ್ಷ್ಮಿಯೆಂಬಂತೆ
ಆರ್ತ ಪ್ರಜಾಗಣಕ್ಕೆ ವರ ಅಭಯದಾನ ಮಾಡುವ
ಆ ದೇವಿಯನ್ನು. ರಾಜರ ಮಹಿಮೆಯೆನ್ನುವುದು
ಎಲ್ಲಿ ಹೋಗಬೇಕಾದಾಗ ತೀರಾ ಬಾಗುವುದೋ
ಅಂಥ ದರಿದ್ರರ ಕಿರುಬಾಗಿಲ ಮುಂದೆ ನಿಂತು
ತಾಯಂತೆ ದಯೆಯನ್ನು ಹಂಚುತ್ತಿರುವಳು. ಸಿಂಹಿಯಂತೆ
ನಾಲ್ಕು ದಿಕ್ಕಿನಲ್ಲೂ ತನ್ನ ಮರಿಗಳನ್ನು ಕಾಯುತ್ತಿರುವಳು.
ಹೆದರಿಕೆಯಿಂದ ಯಾವ ಶತ್ರುವೂ ಹತ್ತಿರ ಬಾರನು.
ಲಜ್ಜೆಯುಳಿದು ಭಯರಹಿತಳಾಗಿ ಪ್ರಸನ್ನಹಾಸಿನಿ
ಶೌರ್ಯಸಿಂಹವನ್ನೇರಿದ ಜಗದ್ಧಾತ್ರಿನಿ
ದಯೆಯೇ ತಾನಾಗಿ ತಿರುಗುತ್ತಿರುವಳು.
ರಮಣಿಯ ಕಮನೀಯ ಬಾಹುದ್ವಯದ ಮೇಲಣ
ಆ ಸ್ವತಂತ್ರವಾದ, ಕುಂದಿಲ್ಲದ, ಬಲದೆದುರಲ್ಲಿ
ಕಂಕಣ ಕಿಂಕಿಣಿಗಳ ಝಣ ಝಣ ಶಬ್ದಕ್ಕೆ ಧಿಕ್.
ವರಾರೋಹೆ, ಬಹುಕಾಲ ಕೆಲಸಮಾಡದ
ನನ್ನ ಪ್ರಾಣ ದೀರ್ಘ ಶೀತದಲ್ಲಿ ನಿದ್ರಿಸಿದ್ದು
ಎಚ್ಚೆತ್ತ ಭುಜಂಗದಂತೆ ಅಶಾಂತವಾಗಿ ಎದ್ದಿದೆ.
ಬಾ ಇಬ್ಬರೂ ಬಲವಾದ ಅಶ್ವಗಳನ್ನು ತೆಗೆದುಕೊಂಡು
ದೀಪ್ತ ಗಗನ ಜ್ಯೋತಿಗಳಂತೆ ಅತಿ ವೇಗದಿಂದ
ಜೊತೆ ಜೊತೆಯಾಗಿ ಹೊರಟು ಹೋಗೋಣ.
ಕಟುವಾದ ಪುಷ್ಪಗಂಧದ ಮದಿರೆಯಿಂದ,
ಆಳವಾದ ನಿದ್ರೆಯಿಂದ, ರುದ್ಧ ಸಮೀರಣದ
ಘೋರವಾದ ಈ ಅರಣ್ಯದ ಹೊಟ್ಟೆಯೊಳಗಿಂದ
ಹೊರಬೀಳೋಣ.

ಚಿತ್ರಾಂಗದಾ

ಓ ಕೌಂತೇಯ, ಈ ಲಾಲಿತ್ಯ,
ಈ ಕೋಮಲ ಛಿರುತೆ, ಮುಟ್ಟಿದರೆ ನೋಯುವೆನೆಂಬ

ಕಾತರಿಸುವ ಶಿರೀಷದಂತೆ ಮೆದುವಾದ ಈ ರೂಪು,
ಇದನ್ನೆಲ್ಲ ಎರವಲ, ನಾಲಿ ಬಟ್ಟೆಯಂತೆ
ತುಂಬು ಹೇಸಿಕೆಯಲ್ಲಿ ಹರಿದು ಕಾಲಡಿ ಎಸೆದರೆ
ಆ ನಷ್ಟವನ್ನು ಸಹಿಸಲಾಪೆಯಾ ಹೇಗೆ? ಕಾಮಿನಿಯರ
ಬೆರಗು ಒಯ್ಯಾರ ಮಾಯ ಮಂತ್ರವನ್ನು ದೂರಮಾಡಿ,
ಬಳ್ಳಿಯಂತೆ ಸದಾ ಕುಗ್ಗಿ ಹೊರಳುವುದನ್ನು ಬಿಟ್ಟು,
ಗಾಳಿಯ ಭರದಲ್ಲಿ ಬಾಗಿ ಸುಂದರವಾಗಿರುವ
ಪರ್ವತದ ತೇಜಸ್ವಿಯಾದ ತರುಣ ವೃಕ್ಷದಂತೆ
ಸರಳ ಉನ್ನತ ವೀರ್ಯವತ್ತಾದ ಆಂತರ್ಯ ಬಲದಿಂದ
ಎದ್ದು ನಿಂತುದಾದರೆ, ಅದೇನು ಗಂಡಿನ ಕಣ್ಣಿಗೆ
ಚೆನ್ನಾಗಿರುವುದೇ? ಇರಲಿ ಬಿಡು; ಅದಕ್ಕಿಂತ
ಇದೇ ಉತ್ತಮ. ನನ್ನ ಯೌವನವೆನ್ನುವುದು
ಎರಡು ದಿನದ ಬಹು ಮೂಲ್ಯ ಸಂಪತ್ತು. ಪ್ರಯತ್ನದಿಂದ
ಸಜ್ಜುಗೊಳಿಸಿ ದಾರಿ ಕಾದು ಕುಳಿತಿರುವೆನು.
ಸಮಯ ಬಂದಿರುವಾಗ ಈ ನನ್ನ ದೇಹಪಾತ್ರದ
ಸುಧೆಯನ್ನು ಅದರ ಅರುಗಿನವರೆಗೆ ತುಂಬಿ
ಕುಡಿಯುವನಾಗು. ಸುಖವನ್ನೀಂಟಿ ತಣಿದ ಮೇಲೆ
ಕೆಲಸದ ತೊಡಕಿನಲ್ಲಿ ಹೊರಟು ಹೋಗುವೆಯಂತೆ.
ಮುಪ್ಪು ಬರಲು ನಾನು ನೀನು ಕೊಟ್ಟ ಸ್ಥಾನದಲ್ಲಿ
ಒಂದು ಕಡೆ ಬಿದ್ದಿರುವೆನು. ರಾತ್ರಿಯ ಹೊತ್ತಿನ
ನರ್ಮಸಹಚರಿ ಹಗಲ ಕರ್ಮಸಹಚರಿಯಾಗಿ
ಬಲ ಕೈಗೆ ಅನುಚರವಾಗಿ ಸದಾ ಜೊತೆಯಾದ
ಎಡಗೈಯಂತೆ ಇದ್ದರೆ ಅದೇನು ಗಂಡಿನ ಚೇತನಕ್ಕೆ
ಚೆನ್ನಾಗಿರುತ್ತದೆಯೇ?

ಅರ್ಜುನ

ನಿನ್ನ ರಹಸ್ಯವನ್ನು
ನಾನು ಅರಿಯಲಾರೆನು. ಇಷ್ಟು ದಿನ ಇದ್ದು ಆಯಿತು.

ಆದರೂ ಗುಟ್ಟನ್ನು ಬಿಡಿಸದಂತಿದೇನೆ. ನೀನು ಸದಾ ಗುಪ್ತವಾಗಿರುತ್ತ
ನನ್ನಿಂದ ಮರಸಿಕೊಂಡಿರುವಂತೆ ಕಾಣುತ್ತದೆ.
ಪ್ರತಿಮೆಯ ಅಂತರಾಳದಲ್ಲಿರುವ ದೇವಿಯಂತೆ
ಮರೆಯ ನೀನು ನನಗೆ ಚುಂಬನದ ಅಮೂಲ್ಯ ರತ್ನವನ್ನು
ಆಲಿಂಗನ ಸುಧೆಯನ್ನು ಪ್ರಸಾದವಾಗಿ ನೀಡುತ್ತಿರುವೆ.
ನಿನಗಾಗಿ ನೀನು ಏನನ್ನೂ ಬಯಸಿಲ್ಲ, ತೆಗೆದುಕೊಂಡಿಲ್ಲ.
ಅಂಗಹೀನ ಛಂದಹೀನ ಪ್ರೇಮವೋ ಈ ದೇಹದಲ್ಲಿ
ಪ್ರತಿ ಕ್ಷಣವೂ ಸಂತಾಪವನ್ನು ಎಚ್ಚರಿಸುತ್ತಿದೆ.
ತೇಜಸ್ವಿನಿ! ಮಧ್ಯೆ ಮಧ್ಯೆ ಒಂದೊಂದು ಮಾತಿನಲ್ಲಿ
ನಿನ್ನ ಪರಿಚಯುವನ್ನು ಪಡೆಯುತ್ತಿದೇನೆ. ಅದರೆದುರಲ್ಲಿ
ಈ ಸೌಂದರ್ಯರಾಶಿ ಬರಿಯ ಮಣ್ಣಿಂದ ಮಾಡಿದ
ಒಂದು ಮೂರ್ತಿಯಂತೆ, ನಿಪುಣನಿಂದ ಚಿತ್ರಿತವಾದ
ಶಿಲ್ಪ ಯವನಿಕೆಯಂತೆ, ತೋರುತ್ತಿದೆ. ಮಧ್ಯೆ ಮಧ್ಯೆ
ನೀನು ಈ ರೂಪವನ್ನು ತಡೆಯಲಾರೆ ಎಂಬಂತೆ,
ತಳಮಳದಿಂದ ನಡುಗುತ್ತಿರುವಂತೆ, ಕಾಣುತ್ತದೆ.
ನಿತ್ಯದೀಪ್ತವಾದ ನಗೆಯ ಒಳಗೆ ಕಣ್ಣೀರ ಭಾರ
ವಾಸಿಸುತ್ತಿದೆ; ಮಧ್ಯೆ ಮಧ್ಯೆ ಉಕ್ಕಿ ಹರಿಯುತ್ತಿದೆ.
ಇನ್ನೇನು ಕ್ಷಣದಲ್ಲಿ ಮರೆ ಮುರಿದು ಬೀಳುವುದೊ
ಎಂದು ತೋರುತ್ತಿದೆ. ಸಾಧಕನ ಬಳಿ ಮೊದಲು
ಮನೋಹರ ಮಾಯಾಶರೀರವನ್ನು ಧರಿಸಿ
ಭ್ರಾಂತಿ ಐತರುವುದು. ಅನಂತರ ಸತ್ಯ ಕಂಡರಿವುದು ;
ಭೂಷಣಹೀನ ರೂಪದಿಂದ ಒಳಹೊರಗನ್ನು ಬೆಳಗುವುದು.
ನಿನ್ನ ಆ ಮರೆಯ ಸತ್ಯ ಏನಿದೆ ಅದನ್ನು ಕೊಡು ;
ನನ್ನ ಸತ್ಯ ಏನಿದೆ, ಅದನ್ನು ತೆಗೆದುಕೋ.
ಅವುಗಳ ಮಿಲನ ಎಂದಿಗೂ ದಣಿಯದು. ಅಳು ಏಕೆ ಪ್ರಿಯೆ ?
ಮುಖವನ್ನು ಕೈಯಿಂದ ಮುಚ್ಚಿದ ವ್ಯಾಕುಲತೆ ಏಕೆ ?
ನೋಯಿಸಿದೆನೆ ಪ್ರಿಯತಮೆ ? ಹಾಗಾದರೆ ತಡೆ ತಡೆ ;

ಈ ನಿನ್ನ ಮನೋಹರ ರೂಪ ನನ್ನ ಪುಣ್ಯ ಫಲ.
ಈ ಯೌವನಯಮುನೆಯ ಆಚೆಯ ದಡದಿಂದ
ವಸಂತ ಸಮೀರದಲ್ಲಿ ಮಧ್ಯೆ ಮಧ್ಯೆ ಇಕೋ ಸಂಗೀತ
ಕೇಳ ಬರುತ್ತಿದೆಯಲ್ಲಾ ಇದು ನನ್ನ ಮಹಾಪುಣ್ಯ.
ಈ ಅನುಭವ ನನ್ನ ಸುಖದಲ್ಲಿ ಹೆಚ್ಚಿನ ಸುಖ;
ಆಶೆಯಲ್ಲಿ ಹೆಚ್ಚಿನ ಆಸೆ, ಹೃದಯಕ್ಕಿಂತ ಹಿರಿದು;
ಆದ ಕಾರಣವೇ ಅದು ಹೀಗೆ ನನಗೆ
ಹೃದಯದ ವ್ಯಥೆಯೆಂದು ತೋರುವುದು ಪ್ರಿಯೆ.

೧೦

ಮದನ, ವಸಂತ ಮತ್ತು ಚಿತ್ರಾಂಗದಾ

ಮದನ

ಇಂದು ಕೊನೆಯ ರಾತ್ರಿ.

ವಸಂತ

ಈ ಒಂದು ರಾತ್ರಿ
ಮುಗಿಯಿತೆಂದ ಮೇಲೆ ನಿನ್ನ ಅಂಗಶೋಭೆ
ವಸಂತದ ಅಕ್ಷಯ ಭಾಂಡಾರಕ್ಕೆ ಹಿಂದಿರುಗುತ್ತದೆ.
ಪಾರ್ಥನ ಚುಂಬನದ ಸ್ಮೃತಿ ಮರೆತು ನಿನ್ನ ಓಷ್ಠರಾಗ
ಲತೆಯ ಎರಡು ನವಕಿಸಲಯದಲ್ಲಿ ಮಂಜರಿಯಾಗುತ್ತದೆ.
ನಿನ್ನ ಅಂಗವರ್ಣ ನೂರು ಬಿಳಿಯ ಹೂವಲ್ಲಿ
ನೂತನ ತನುವನ್ನು ಧರಿಸಿ, ಎಚ್ಚರವಾದಾಗ ಮರೆಯುವ
ಸ್ವಪ್ನದಂತೆ, ಹಿಂದಣ ಚರಿತೆಯನ್ನು ತೊರೆಯುವುದು.

ಚಿತ್ರಾಂಗದಾ

ಹೇ ಅನಂಗ, ಹೇ ವಸಂತ, ಹಾಗಾದರೆ ಈ ರಾತ್ರಿ
ಈ ನನ್ನ ನಾಶವಾಗಲು ಕಾದಿರುವ ರೂಪ

ಸೋತ ದೀಪದ ಅಂತಿಮ ಶಿಖೆ ರಾತ್ರಿಯ ಕೊನೆಯಲ್ಲಿ
ಹಠಾತ್ತಾಗಿ ಜ್ವಲಿಸುವಂತೆ ಉಜ್ವಲತರ ಆಗಲಿ.

ಮದನ

ಆಗಲಿ.

ಸಖಾ, ಪ್ರಾಣಪೂರ್ಣವೇಗದಿಂದ ದಕ್ಷಿಣ ಪವನವನ್ನು
ನೀನು ಊದಿಕೊಡು. ಯೌವನದ ಕ್ಲಾಂತ ಮಂದಸ್ರೋತ
ಅಂಗ ಅಂಗದಲ್ಲಿ ನವೋಲ್ಲಾಸದಲ್ಲಿ,
ಮತ್ತೊಮ್ಮೆ ಹೊಮ್ಮಲಿ. ನಾನು ಪುಷ್ಪಶರದಿಂದ
ನಿಶೀಥದ ನಿದ್ರೆಯನ್ನು ಭೇದಿಸಿ ಭೋಗವತೀ ತಟನಿಯ
ತರಂಗದ ಉಬ್ಬಿನಲ್ಲಿ ಬಾಹುಪಾಶಬದ್ಧವಾದ
ಇಬ್ಬರು ಪ್ರಣಯಿಗಳ ತನುವನ್ನು ತೇಲಬಿಡುತ್ತೇನೆ.

೧೧

ಕೊನೆಯ ರಾತ್ರಿ. ಅರ್ಜುನ, ಚಿತ್ರಾಂಗದಾ

ಚಿತ್ರಾಂಗದಾ

ಪ್ರಭು, ಆಶೆ ತೀರಿತೊ? ಈ ಸುಲಲಿತ ಸುಘಟಿತ
ನವನೀತ ಕೋಮಲವಾದ ಈ ಸೌಂದರ್ಯದ
ಗಂಧ ಎಷ್ಟು ಮಧು ಎಷ್ಟು ಇತ್ತೋ ಅಷ್ಟನ್ನೂ
ಪಾನ ಮಾಡಿ ಆಯಿತೊ? ಇಲ್ಲ ಇನ್ನೂ ಉಳಿದಿದೆಯೊ?
ಮತ್ತೇನನ್ನಾದರೂ ಬಯಸುವೆಯೊ? ನನ್ನಲ್ಲೇನಿತ್ತು
ಅದೆಲ್ಲ ಮುಗಿಯಿತೆ? ಇನ್ನೂ ಇಲ್ಲ, ಪ್ರಭು.
ಒಳಿತಾಗಲಿ ಅಲ್ಲದ್ದಾಗಲಿ ಇನ್ನೇನು ಉಳಿದಿದೆ
ಅದನ್ನೂ ಇಂದು ಕೊಡುವೆನು. ಪ್ರಿಯತಮ
ನಿನಗೆ ಚೆನ್ನಾಗಿರುವುದೆಂದು ಎಣಿಸಿ
ನಂದನ ಕಾನನದಿಂದ ಬಹು ಪ್ರಯತ್ನ ಪೂರ್ವಕ
ಈ ಸೌಂದರ್ಯ ಪುಷ್ಪರಾಶಿಯನ್ನು ಆರಿಸಿ ತಂದು

ನಿನ್ನ ಚರಣ ತಲದಲ್ಲಿ ನಿವೇದನ ಮಾಡಿದೆನು.
ಪೂಜೆ ಸಾಂಗವಾಗಿದ್ದರೆ ಅಪ್ಪಣೆ ಕೊಡು.
ನಿರ್ಮಾಲ್ಯದ ಹಾರವನ್ನು ಮಂದಿರದ ಹೊರಕ್ಕೆಸೆಯುವೆನು.
ಇನ್ನೊಮ್ಮೆ ಸೇವಿಕೆಯ ಕಡೆ ಪ್ರಸನ್ನ ನಯನದಿಂದ ನೋಡು.
ನಾನು ಈವರೆಗೆ ನಿನಗೆ ಪೂಜೆಯಲ್ಲಿ ಅರ್ಪಿಸಿದ
ಸುಕೋಮಲ ಸುಮಧುರ ಸಂಪೂರ್ಣ ಸುಂದರವಾದ
ಹೂವಾಗಿ ನಾನು ಎಲ್ಲವೇಳೆಯೂ ಇದ್ದಿಲ್ಲ, ಪ್ರಭು.
ನನ್ನಲ್ಲಿ ದೋಷ ಇದೆ, ಗುಣ ಇದೆ, ಪಾಪ ಇದೆ, ಪುಣ್ಯ ಇದೆ,
ಎಷ್ಟೋ ದೈನ್ಯ ಇದೆ; ಇದೆ ಆ ಜನ್ಮದ ಎಷ್ಟೋ
ಅತೃಪ್ತ ಅತಿ ಆಶೆ. ಸಂಸಾರ ಪಥದ ಪಾಂಥನು,
ಧೂಲಿಲಿಪ್ತನಾಗಿ ಮನೆಯುಳಿದ ನಡೆಯುವನು,
ಎರಡು ಕ್ಷಣದ ಜೀವನದ ಅಕಲಂಕ ಶೋಭೆಯೆಂಬ
ಕುಸುಮ ಲಾವಣ್ಯವನ್ನು ಎಲ್ಲಿಂದ ಪಡೆಯುವನು?
ಆದರೆ ರಮಣಿಯ ಹೃದಯ ಅಕ್ಷಯ ಅಮರವಾಗಿ ಉಳಿದಿದೆ.
ಒಂದು ಹೆಣ್ಣಿನ ದುಃಖ ಸುಖ ಆಶೆ ಭಯ ಲಜ್ಜೆ ದೌರ್ಬಲ್ಯ,
ಧೂಲೀಮಯಿಯಾದ ಧರಣಿಯ ಮಡಿಲ ಮಕ್ಕಳು,
ಬೇರೆ ಎಷ್ಟೋ ಭ್ರಾಂತಿ, ಮತ್ತೆ ಎಷ್ಟೋ ವ್ಯಥೆ,
ಇನ್ನು ಎಷ್ಟೋ ಪ್ರೇಮ, ಎಲ್ಲವೂ ಒಂದೆ ಸಲ
ಬೆರೆತು ಗಟ್ಟಿಯಾಗಿವೆ. ಒಂದು ಸೀಮಾಹೀನ
ಅನಂತಮಹದಪೂರ್ಣತೆ ಉಳಿದಿದೆ.
ಕುಸುಮದ ಸುಗಂಧ ದೊರಕಿದ್ದುದಾದರೆ ಒಮ್ಮೆ
ಜನ್ಮ ಜನ್ಮಾಂತರದಲ್ಲಿ ಈ ಸೇವಿಕೆಯಕಡೆ ನೋಡು.

ಸೂರ್ಯೋದಯ

ಅವಕುಂಠನ ತೆರೆದು

ನಾನು ಚಿತ್ರಾಂಗದಾ, ರಾಜೇಂದ್ರ ನಂದಿನಿ.
ನಿನಗೆ ನೆನಪಿದ್ದೀತು, ಹಿಂದೆ ಒಂದು ದಿನ
ಆ ಸರೋವರದ ತಡಿಯ ಶಿವಾಲಯದಲ್ಲಿ

ಒಬ್ಬ ಹೆಣ್ಣು ಬಹು ಆಭರಣದ ಭಾರವನ್ನು
ತನ್ನ ರೂಪಹೀನ ತನುವಿಗೆ ಹೇರಿಕೊಂಡು
ನಿನ್ನನ್ನು ಕಾಣಿಸಿಕೊಂಡಳು. ಯಾರು ಬಲ್ಲರು
ನಾಚಿಕೆಯಿಲ್ಲದೆ ವಾಚಾಳಿ ಏನು ಹರಟಿದಳೊ?
ಪುರುಷರು ಪುರುಷರನ್ನು ಆರಾಧಿಸುವಂತೆ ಅವಳು
ನಿನ್ನನ್ನು ಆರಾಧಿಸಿದಳು. ನೀನವಳನ್ನು ನಿರಾಕರಿಸಿದೆ.
ಒಳ್ಳೆಯದೆ ಮಾಡಿದೆ. ಒಂದು ವೇಳೆ ಅವಳನ್ನು
ಆ ಸಾಮಾನ್ಯ ನಾರೀರೂಪದಲ್ಲಿ ಗ್ರಹಿಸಿದ್ದೆಯಾದರೆ
ಅವಳ ಹೃದಯದಲ್ಲಿ ಸಾವುಬರುವವರೆಗೂ
ಅನುತಾಪ ಕೊರೆಯುತ್ತಿತ್ತು. ಪ್ರಭು! ನಾನು ಅದೆ ನಾರಿ.
ಆದರೂ ಅವಳಲ್ಲ. ಅದು ನನ್ನ ಹೀನ ಛದ್ಮವೇಷ.
ಆಮೇಲೆ ವಸಂತನ ವರದಿಂದ ಒಂದು ವರ್ಷ
ಅಪೂರ್ವ ರೂಪವನ್ನು ಪಡೆದೆನು. ವೀರಹೃದಯವನ್ನು
ಮಾಯಾಭರದಿಂದ ತಣಿಸಿದೆನು. ಇದುಕೂಡ ನಾನಲ್ಲ.
ನಾನು ಚಿತ್ರಾಂಗದಾ; ದೇವಿಯಲ್ಲ; ಹಾಗೆಯೇ
ನಾನೊಬ್ಬ ಸಾಮಾನ್ಯ ರಮಣಿಯೂ ಅಲ್ಲ.
ಪೂಜೆಮಾಡಿ ತಲೆ ಮೇಲೆ ಇರಿಸಿಕೊಳ್ಳಬೇಕೇ
ನಾನಂಥ ಹೆಣ್ಣಲ್ಲ. ಕಡಮೆಯೆಂದು ಕಂಡು
ಹಿಂದೆ ಇರಿಸಿ ಹೊರೆಯಬೇಕೇ ಅಂಥ ಹೆಣ್ಣುಕೂಡ
ನಾನಲ್ಲ. ಕಷ್ಟವಾದ ಜೀವನ ಮಾರ್ಗದಲ್ಲಿ
ಪಕ್ಕದಲ್ಲಿ ಇರಿಸಿಕೊಳ್ಳುವುದಾದರೆ, ದುರೂಹವಾದ
ಚಿಂತೆಯಲ್ಲಿ ಭಾಗ ಕೊಡುವುದಾದರೆ, ಕಠಿನ ವ್ರತದಲ್ಲಿ
ನಿನಗೆ ಸಹಾಯವಾಗಲು ಅನುಮತಿ ಕೊಡುವೆಯಾದರೆ,
ಸುಖದಲ್ಲಿ ದುಃಖದಲ್ಲಿ ನನ್ನನ್ನು ಸಹಚರಿ ಮಾಡಿದರೆ,
ನೀನು ನನ್ನನ್ನರಿಯುವೆ. ಈಗ ನಾನು ಗರ್ಭದಲ್ಲಿ
ಧರಿಸಿರುವ ನಿನ್ನ ಸಂತಾನ ಗಂಡೇ ಆದರೆ
ಎಳತನದಿಂದ ವೀರಶಿಕ್ಷೆಯನ್ನು ಕೊಟ್ಟು

ಅವನನ್ನು ಎರಡನೆಯ ಅರ್ಜುನನನ್ನು ಮಾಡಿ
ಒಂದು ದಿನ ತಂದೆಯ ಚರಣದ ಬಳಿ ಕಳುಹಿಸುವಾಗ
ನನ್ನನ್ನು ನೀನು ಅರಿಯುವೆ ಪ್ರಿಯತಮ. ಈ ದಿನ
ಇಷ್ಟುಮಾತ್ರ ಅರಿಕೆ ಮಾಡುತ್ತೇನೆ: ನಾನು ಚಿತ್ರಾಂಗದಾ
ರಾಜೇಂದ್ರನಂದಿನೀ.

ಅರ್ಜುನ

ಪ್ರಿಯೆ ನಾನಿಂದು ಧನ್ಯ.

Printed by U. Narasimha Mallya,
Proprietor, B. B. D. Power Press, Cottonpet, Bangalore City.

ಶ್ರೀನಿವಾಸ ರಚಿತ

ಕೆಲವು ಸಣ್ಣ ಕತೆಗಳು
ಬಿನ್ನಹ (ಗೀತೆಗಳು)
ಶಾನ್ತಾ (ಸಣ್ಣ ದೃಶ್ಯ)
ಸಾವಿತ್ರಿ (,,)
ಸಣ್ಣ ಕತೆಗಳು
ಸಾಹಿತ್ಯ (ಉಪನ್ಯಾಸ)
ಅರುಣ (ಪದ್ಯಗಳು)
ವಿಮರ್ಶೆ ೧ (ಲೇಖನಗಳು)
ಉಷಾ (ಸಣ್ಣ ದೃಶ್ಯ)
ಸುಬ್ಬಣ್ಣ (ಒಂದು ಕತೆ)
ತಾಳೀಕೋಟೆ (ಒಂದು ಪ್ರಕರಣ)
ವಿಮರ್ಶೆ ೨ (ಲೇಖನಗಳು)
ನಾಲ್ಕು ಸಣ್ಣ ಕತೆಗಳು
ಕನ್ನಡದ ಸೇವೆ (ಒಂದು ಭಾಷಣ)
ಮಂಜುಳಾ (ಸಾಮಾಜಿಕ ದೃಶ್ಯ)
ತಾವರೆ (ಪದ್ಯಗಳು)
ಜನತೆಯ ಸಂಸ್ಕೃತಿ (ಉಪನ್ಯಾಸ)
ಚೆಲುವು (ಪದ್ಯಗಳು)
ಶಿವ ಛತ್ರಪತಿ (ಐತಿಹಾಸಿಕ ದೃಶ್ಯ)
ವಿಮರ್ಶೆ ೩ (ಲೇಖನಗಳು)
ಯಶೋಧರಾ (ನಾಟಕ)
ಮಲಾರ (ಪದ್ಯಗಳು)
ಸಣ್ಣ ಕತೆಗಳು ೪
ರವೀಂದ್ರನಾಥ ಠಾಕೂರರು
ಸಣ್ಣ ಕತೆಗಳು ೫
ಶ್ರೀ ರಾಮಕೃಷ್ಣ
ತಿರುಪಾಣಿ (ನಾಟಕ)
ಜನಪದ ಸಾಹಿತ್ಯ (ಉಪನ್ಯಾಸ)
ಕಾಕನಕೋಟೆ (ನಾಟಕ)
ಆದಿಕವಿ ವಾಲ್ಮೀಕಿ
ವಿಮರ್ಶೆ ೪ (ಲೇಖನಗಳು)
ಸಣ್ಣ ಕತೆಗಳು ೬
ಗೌಡರ ಮಲ್ಲಿ (ಪದ್ಯಕಥೆ)
ರಾಮನವಮಿ (,,)
ಮೂಕನ ಮಕ್ಕಳು (,,)
ತಾಯ್ನುಡಿಯ ತಮ್ಮಡಿ
ನವರಾತ್ರಿ ೨
ನವರಾತ್ರಿ ೪

(ಇಂಗ್ಲೀಷಿನಲ್ಲಿ)

Popular Culture in Karnataka
The Poetry of Valmiki
Short Stories (in four volumes)
Subbanna

ಈ ಪುಸ್ತಕಗಳು ದೊರೆಯುವ ಸ್ಥಳಗಳು :—

ಸತ್ಯಶೋಧನ ಪುಸ್ತಕ ಭಾಂಡಾರ, ಕೋಟೆ, ಬೆಂಗಳೂರು ಸಿಟಿ.
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ.
ಜೀವನ ಕಾರ್ಯಾಲಯ,
43–44, ಗವಿಪುರದ ವಿಸ್ತರಣ, ಬಸವನಗುಡಿ ಅಂಚೆ.